2. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ :

ವಿಷಯ :- ಇಸ್ಕಾನ್‌ನಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಒಂದು ನಿಮಿಷ ತಾವು ಕುಳಿತುಕೊಳ್ಳಿ. ತಮ್ಮ ಕಛೇರಿಯಲ್ಲಿ 11, 12ನೇ ತಾರೀಖು ವಿಧೇಯಕಗಳನ್ನು ಪಾಸು ಮಾಡಬೇಕು, Question ಆಗಲಿ. call attentions ಆಗಲಿ ತೆಗೆದುಕೊಳ್ಳುವುದು ಬೇಡವೆಂದು ಸ್ಪಷ್ಟವಾಗಿ ತೀರ್ಮಾನವಾಗಿತ್ತು. ಇವತ್ತು ಕೊನೆಯ ದಿವಸ. ನಮ್ಮ Questions, call attentions ಬೇರೆ ಮೆಂಬರ್ಸ್‌ಗೆ ಸಂಬಂಧಪಟ್ಟಿದ್ದು ತೆಗೆದುಕೊಳ್ಳಬೇಕೆಂತಲೂ ಆಗಿತ್ತು. ಇವರು ಏಳೆಂಟು ಬಿಲ್‌ಗಳನ್ನು add ಮಾಡಿದ್ದಾರೆ. ದಿವಸ ಎರಡೆರಡು ಬಿಲ್‌ಗಳನ್ನು add ಮಾಡಿಕೊಂಡು ಹೋಗಿ last three days ನಲ್ಲಿ ನಮ್ಮನ್ನು ನೀವು ತರಾತುರಿಗೆ ಇಡುವುದು ಅಷ್ಟೊಂದು ಒಳ್ಳೆಯದಲ್ಲ. ನಾವು ನಿನ್ನೆ ಮೊನ್ನೆ ಏಕೆ ಕೇಳಲಿಕ್ಕೆ ಬರಲಿಲ್ಲ ಎಂದರೆ Yes, we were Committed. ನಿಮ್ಮ ಹತ್ತಿರ ನಾವು ಮಾತು ಕೊಟ್ಟಿದ್ದೆವು. Government business ಎರಡು ದಿವಸ ಆಗಲೆಂದು ಹೇಳಿ. ನಿನ್ನೆ ಮೊನ್ನೆ ನಾವು co-operate ಮಾಡಿದ್ದೇವೆ. ತಾವು ಇವತ್ತು ಸದಸ್ಯರ ಕಾರ್ಯಕ್ರಮಗಳಿಗೆ ಆದ್ಯತೆಯನ್ನು ಕೊಡುತ್ತೇವೆಂದು ಹೇಳಿದ್ದೀರಿ. ನಾವು raise ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು. ನಾವು ನಿನ್ನೆ ನೀವು ಕರೆಯುವುದಕ್ಕಿಂತ ಹತ್ತು ನಿಮಿಷ ಮೊದಲೇ ಬಂದು ಕುಳಿತಿದ್ದೇವೆ. ಅವರ ಕೆಲಸವನ್ನೆಲ್ಲಾ ಮಾಡಿಕೊಟ್ಟಿದ್ದೇವೆ. ದಯವಿಟ್ಟು ನಮ್ಮ ಕೆಲಸಕ್ಕೂ ಸ್ವಲ್ಪ ಆದ್ಯತೆಯನ್ನು ಕೊಡಬೇಕು.

ನಾನು ಏನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ, ಅದರಲ್ಲಿ ಎರಡು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿಲುವಳಿ ಸೂಚನೆ ಏತಕ್ಕೆ ಕೊಟ್ಟೆ ಎಂದರೆ ನಿನ್ನೆ ಸುಮಾರು ಆರರಿಂದ ಏಳು ಸಾವಿರ ಜನ ಅಕ್ಷರ ದಾಸೋಹ ಬಿಸಿಯೂಟ ಯೋಜನೆಯಲ್ಲಿ ಕೆಲಸ ಮಾಡುತ್ತಿರುವವರು ಬೆಂಗಳೂರಿನಲ್ಲಿ ಒಂದು ದೊಡ್ಡ ಪ್ರಮಾಣದ ಪ್ರದರ್ಶನ ಮಾಡಿದರು. ಒಂದು ಮುಷ್ಕರವನ್ನು ಮಾಡಿದರು. ಏತಕ್ಕೆ ಮಾಡಿದರು ಎಂದರೆ ಅವರ ಉದ್ದೇಶ ಒಂದು, "ಇದನ್ನು ಸರ್ಕಾರ ಖಾಸಗೀಕರಣ ಮಾಡುವುದಕ್ಕೆ ಹೊರಟಿದೆ. ಎಲ್ಲ ಕಡೆ ಅಕ್ಷರ ದಾಸೋಹ ಕಾರ್ಯಕ್ರಮವನ್ನು ಖಾಸಗಿಯವರಿಗೆ ವಹಿಸಿಕೊಡುವುದಕ್ಕೆ ಹೊರಟಿದ್ದೀರಿ, ಇದರಿಂದ ನಮಗೆ ತೊಂದರೆಯಾಗುತ್ತದೆ," ಎಂದು ಎರಡನೆಯದು, ನಮಗೆ ಏನಾದರೂ ಸೇವಾ ಭದ್ರತೆ ಮತ್ತು ನಮಗೆ ಕೊಡುತ್ತಿರುವ ಭತ್ಯೆಯನ್ನು ಜಾಸ್ತಿ ಮಾಡಿ ಎಂದು

ಕೇಳುವುದಕ್ಕೆ ಮಾಡಿದರು. ಸೇವಾ ಭದ್ರತೆ ಮತ್ತು ಭತ್ಯೆ ಪಾರ್ಟ್‌ಗೆ ನಾನು ಬರುವುದಿಲ್ಲ. ಈಗೇನು ಈ ಅಕ್ಷರ ದಾಸೋಹ ಕಾರ್ಯಕ್ರಮ ಕರ್ನಾಟಕದಲ್ಲಿ ನಡೆಯುತ್ತಿದೆ, ಇದೊಂದು ಬಹಳ ಉತ್ತಮವಾದ ಕಾರ್ಯಕ್ರಮ.

ಇದು ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ, ಕೇಂದ್ರ ಸರ್ಕಾರದವರು ಸೇರಿ ಮಾಡುತ್ತಿರುವ ಕಾರ್ಯಕ್ರಮ. ಕೇಂದ್ರ ಸರ್ಕಾರದವರು ಒಂದರಿಂದ ಐದನೇ ತರಗತಿ ಮಕ್ಕಳುಗಳಿಗೆ ಅಕ್ಕಿಯನ್ನು ಕೊಡುತ್ತಿದ್ದಾರೆ. ನೀವು ಅದರ ಮೇಲೆ ಹಣವನ್ನು ಕೊಟ್ಟು 1.51 ಪೈಸೆ, 1.60 ಪೈಸೆಯನ್ನು ಕೊಟ್ಟು ಅಕ್ಷರ ದಾಸೋಹವನ್ನು ನಡೆಸುತ್ತಿದ್ದೀರಿ. ಇದರ ಜೊತೆಗೆ ನಮ್ಮ ಬೆಂಗಳೂರು ಮಹಾನಗರ ಪಾಲಿಕೆ ಪ್ರತಿ ಮಗುವಿಗೆ ಆರು ರೂಪಾಯಿಯಂತೆ ಸುಮಾರು 30 ಸಾವಿರ ಮಕ್ಕಳಿಗೆ ಇವತ್ತು ಅಕ್ಷರ ದಾಸೋಹದ ಕೆಳಗಡೆ ಹಣವನ್ನು ಕೊಟ್ಟು ಅಕ್ಷರ ದಾಸೋಹ ಮತ್ತು Medical aid ಅನ್ನು ಕೊಡುತ್ತಿದ್ದಾರೆ. ಇಷ್ಟೊಂದು ದೊಡ್ಡ ವ್ಯಾಪಕವಾದ ಕಾರ್ಯಕ್ರಮ ಈ ರಾಜ್ಯದಲ್ಲಿ ಆಗುತ್ತಿದೆ. ನಿಜವಾಗಿಯೂ ಇದು ಉತ್ತಮವಾದ ಕಾರ್ಯಕ್ರಮ. ರಾಷ್ಟ್ರ ಮತ್ತು ರಾಜ್ಯ ಸರ್ಕಾರಗಳಿಗೆ ಹೆಸರು ತರುವಂಥ ಒಂದು ಕಾರ್ಯಕ್ರಮ. ಮಧ್ಯಾಹ್ನದ ಊಟವನ್ನೇನು ಕೊಡುತ್ತಿದ್ದೀರಿ, ಇದನ್ನು ಯಾರಾದರೂ ಮೆಚ್ಚಬೇಕಾದ ಕಾರ್ಯಕ್ರಮ ಅಲ್ಪ ಸ್ವಲ್ಪ ನಾನು ಆಮೇಲೆ details ಗೆ ಬರುತ್ತೇನೆ. ಗ್ರಾಮೀಣ ಪ್ರದೇಶದಲ್ಲಿ ಇದರಿಂದ ಮಕ್ಕಳ ಹಾಜರಾತಿ ಹೆಚ್ಚಾಗಿದೆ. NutritionProgramme ಏನು ಅಂಗನವಾಡಿಯಲ್ಲಿತ್ತು, ಅದರ ಜೊತೆಗೆ ಇಲ್ಲೂ ಸ್ವಲ್ಪ ಮಧ್ಯಾಹ್ನದ ಒಂದು ಹೊತ್ತು ಮಕ್ಕಳಿಗೆ ಊಟವನ್ನು ಕೊಡುವುದರಿಂದ ಸ್ವಲ್ಪ ಮಟ್ಟಿಗೆ ಇವತ್ತು ಶಾಲೆಯಲ್ಲಿ ಮಕ್ಕಳು ನಗುನಗುತ್ತಾ ಇರುವುದು ಸತ್ಯ.

ಆದರೆ ಅಧ್ಯಕ್ಷರೇ, ಇವತ್ತು ನಮ್ಮ ಮುಂದಿರುವ ಪ್ರಶ್ನೆ ಇದನ್ನು ನೀವು ಖಾಸಗೀಕರಣ ಮಾಡುವುದಕ್ಕೆ ಹೊರಟಿದ್ದೀರಿ. ಮತ್ತು ಈಗಾಗಲೇ ಅನೇಕ ಭಾಗವನ್ನು ಖಾಸಗೀಕರಣ ಮಾಡುಬಿಟ್ಟಿದ್ದೀರಿ. ಏನು ಬಿಸಿಯೂಟ ಎಂದು ಹೇಳಿ ಕಾರ್ಯಕ್ರಮವಿದೆ, ಅದನ್ನು ತಾವು ತಂಗಳೂಟಕ್ಕೆ ತಿರುಗಿಸುತ್ತಿದ್ದೀರಿ. ಮತ್ತು ಏನು ಬೆಂಗಳೂರು ಮಹಾನಗರ ಪಾಲಿಕೆ ಇದೆ, ಇದನ್ನು ಈಗ renew ಮಾಡಬೇಕಾಗಿದೆ. ಮತ್ತು ಇದನ್ನು ನಡೆಸುತ್ತಿರುವ ಸಂಸ್ಥೆಗಳು ಯಾರು? ಬಹಳ ದೊಡ್ಡ ದೊಡ್ಡವರು. ಇಸ್ಕಾನ್ ಅವರು ಇದ್ದಾರೆ. ಅದಮ್ಯ ಅವರು ಇದ್ದಾರೆ. ಇವರು ಹೇಗೆ ನಡೆಸುತ್ತಿದ್ದಾರೆ? ಏತಕ್ಕೆ ನೀವು ಅವರಿಗೆ ಅಷ್ಟೊಂದು ಪ್ರೋತ್ಸಾಹವನ್ನು ಕೊಟ್ಟುಕೊಂಡು, ಅಷ್ಟೊಂದು ಮಾತನಾಡಿಕೊಂಡು, ಅಷ್ಟೊಂದು ಅವರನ್ನು ತಲೆಯಮೇಲೆ ಹತ್ತಿಸಿಕೊಂಡು ಈ

ಕಾರ್ಯಕ್ರಮಗಳನ್ನು ಮಾಡುತ್ತಿದ್ದೀರಿ? ಸರ್ಕಾರ ಏತಕ್ಕೆ ಈ ಬಗ್ಗೆ ಅಲ್ಪ ಸ್ವಲ್ಪವಾದರೂ ಗಮನ ಹರಿಸಲಿಲ್ಲ ಎನ್ನುವುದರ ಬಗ್ಗೆ ಇವತ್ತು ನಾನು ಇಲ್ಲಿ raise ಮಾಡುತ್ತೇನೆ. ಇವತ್ತು raise ಮಾಡದೇ ಹೋದರೆ ಏನಾಗುತ್ತೆ, ನಾಳೆ ನಾಡಿದ್ದರಲ್ಲಿ ಅದು renew ಆಗುತ್ತೆ. ನಿಮ್ಮ ಬೆಂಗಳೂರು ಮಹಾ ನಗರ ಪಾಲಿಕೆಯಿಂದ ಏನು ಈ ವರ್ಷಕ್ಕೆ ಕಾರ್ಯಕ್ರಮಕ್ಕೆ ಹಣವನ್ನು ಕೊಡಬೇಕಾಗಿದೆ, ಆರು ರೂಪಾಯಿ Per child, ಅದು renew ಆಗಬೇಕಾಗಿದೆ. ಆ ಮಧ್ಯೆ ನೀವು ಗ್ರಾಮೀಣ ಪ್ರದೇಶಕ್ಕೆ ಹುಬ್ಬಳ್ಳಿ-ಧಾರವಾಡ ಸೇರಿ, ಮಂಗಳೂರು ಸೇರಿ, ಬಳ್ಳಾರಿ ಹೊಸದುರ್ಗ ಸೇರಿ ಖಾಸಗಿಯವರಿಗೆ ಕೊಡುತ್ತೇವೆಂದು ಹೇಳಿರುವುದು ಅಲ್ಲಿ ಕೆಲಸ ಮಾಡುತ್ತಿರುವ ಅನೇಕ ಜನರಿಗೆ ನಿರ್ಗತಿಕರನ್ನಾಗಿ ಮಾಡಿದೆ. ವಾಜಪೇಯಿಯವರು ಒಂದು ದಿವಸ ಒಳ್ಳೆಯ ಮಾತನ್ನು ಇಲ್ಲಿ ಹೇಳಿ ಹೋಗಿದ್ದಾರೆ. ಇದನ್ನು Orissa ದಲ್ಲಿ ಕಾರ್ಯಗತ ಮಾಡಿದ್ದಾರೆ. Widows ಗೆ ಆದ್ಯತೆಯನ್ನು ಕೊಟ್ಟು ಮಾಡಿದ್ದಾರೆ. ಒಂದು ಕಡೆ ಅವರಿಗೇನು ನಿರ್ವಸತಿ ಕಾರ್ಯಕ್ರಮವಾಗುತ್ತೆ, ಇನ್ನೊಂದು ಕಡೆ ಮಕ್ಕಳಿಗೆ ಊಟವಾಗುತ್ತೆ ಎಂದು.

ಗ್ರಾಮೀಣ ಪ್ರದೇಶದಲ್ಲೂ 25 ಮಕ್ಕಳಿರುವ ಕಡೆ ಒಬ್ಬರು, 25 ರಿಂದ 70 ಇರುವ ಕಡೆ ಇಬ್ಬರು, 200 ಇರುವ ಕಡೆ ಮೂರು ಜನ ಹೆಣ್ಣುಮಕ್ಕಳಿಗೆ ಒಂದು ಉದ್ಯೋಗ ಸೃಷ್ಟಿಯಾಗುತ್ತಿದೆ ಈ ಕಾರ್ಯಕ್ರಮದಿಂದ. ಒಂದು ಕಡೆಗೆ ಮಕ್ಕಳಿಗೆ ಊಟವನ್ನು ಕೊಡುತ್ತಿದ್ದೀರಿ. ಇನ್ನೊಂದು ಕಡೆ ಯಾರಿಗೋ ಗತಿ ಇಲ್ಲದವರಿಗೆ ಅಲ್ಪ ಸ್ವಲ್ಪ ಅವರಿಗೆ ದಿನನಿತ್ಯದ ಖರ್ಚಿಗಾಗುವಷ್ಟು ಕೂಲಿ ಕೊಟ್ಟುಬಿಟ್ಟು ಅಕ್ಷರ ದಾಸೋಹ ಕೆಲಸವನ್ನು ಮಾಡುವುದಕ್ಕೆ ಹಾಕಿದ್ದೀರಿ. ಇದರ ಮಧ್ಯೆ ತಾವೇನು ಖಾಸಗೀಕರಣ ಮಾಡುವುದಕ್ಕೆ ಹೊರಟಿದ್ದೀರಿ, ಇದು ನಿಜವಾದ ದುರಂತ. ಇದರ main stress ಇವತ್ತು ಇದನ್ನು ಖಾಸಗೀಕರಣ ಮಾಡಿ ಇಸ್ಕಾನ್ ಅವರಿಗೆ ಈ ಕಾರ್ಯಕ್ರಮವನ್ನು ವಹಿಸಿಕೊಡಬೇಕೆಂದು ಹೇಳಿ ಸರ್ಕಾರದ ತಲೆಯಲ್ಲಿ ಇದ್ದಂಗೆ ಇದೆ. ಈಗಾಗಲೇ ಇಸ್ಕಾನ್ ಅವರು ಬಹಳಷ್ಟು ಪ್ರಮಾಣದಲ್ಲಿ ಈ ದೇಶದಲ್ಲಿ ಸುಮಾರು ಐದು ಲಕ್ಷ ಚಿಲ್ಲರೆ ಮಕ್ಕಳಿಗೆ ಈ ಕಾರ್ಯಕ್ರಮವನ್ನು ಅನುಷ್ಠಾನ ಮಾಡಿಸಿಕೊಂಡು ಮಾಡುತ್ತಿದ್ದಾರೆ. ಬಹಳ ಉತ್ತಮವಾದ ಪ್ರಯತ್ನವನ್ನು ಮಾಡುತ್ತಿದ್ದಾರೆ.

ಅದಮ್ಯ ಎಂದು ಹೇಳಿ ಅವರು ಒಂದು ಬೆಂಗಳೂರಿನಲ್ಲಿ ಮಾಡುತ್ತಿದ್ದಾರೆ. ಸುಮಾರು 30-35 ಸಾವಿರ ಮಕ್ಕಳಿಗೆ ಅದಮ್ಯ ಟ್ರಸ್ಟ್‌ನವರು ಅಥವಾ NGO

ಅವರು ಮಾಡುತ್ತಿದ್ದಾರೆ. ಈಗ ನೀವು ಯಾರಿಗಾದರೂ NGO ಗೆ ಇಂಥ ಒಂದು ದೊಡ್ಡ ಕಾರ್ಯಕ್ರಮದೊಳಗೆ ಬಳಸಬೇಕಾದರೆ, ಇಂಥ ಒಂದು ದೊಡ್ಡ ಕಾರ್ಯಕ್ರಮವನ್ನು ವಹಿಸಬೇಕಾದರೆ ಅವರ ಇತಿಹಾಸವೂ ನಿಮಗೆ ಗೊತ್ತಿರಬೇಕಲ್ಲ. ಅವರು ಯಾರು? ಅವರೇನು? ಇವರ ಏನು ಮಾಡಬಹುದು? ಏಕೆ ಈ ಕಾರ್ಯಕ್ರಮಕ್ಕೆ ಬರುತ್ತಾರೆ? I am at mystery ಇವತ್ತೇನಾಗಿದೆ, ಅಂದರೆ ಇಂಡಿಯಾ ದೇಶವನ್ನು ಭಿಕ್ಷುಕರು ಎಂದು ಹೇಳಿ ಚಿತ್ರಿಸುತ್ತಿದ್ದಾರೆ. I have materials here. ಈ ದೇಶದ ಮಕ್ಕಳನ್ನು ಗೊಳೊ ಎಂದು ಅಳುವುದನ್ನು ತೋರಿಸುವುದು, ಈ ದೇಶದ ಮಕ್ಕಳು ಊಟಕ್ಕೆ ಇಲ್ಲದೇ ಇರುವ ರೀತಿ ತೋರಿಸುವುದು, ಈ ದೇಶದ ಮಕ್ಕಳನ್ನು ಸಿಡಿ ಮಾಡಿ ಇಸ್ಕಾನ್ ಅವರು ಅಥವಾ ಅದಮ್ಯ ಚಾರಿಟಿಯವರು ನನಗೇನಾದರೂ ಊಟ ಕೊಡದಿದ್ದರೆ ನಾನು ಹಾಳಾಗಿ ಹೋಗುತ್ತಿದ್ದೆ ಎನ್ನುವುದು. ಈ ದೇಶದ ಮಕ್ಕಳು constructions ಹತ್ತಿರ ಇಟ್ಟಿಗೆ ಹೊರುವುದನ್ನು ತೋರಿಸುವುದು, ಈ ದೇಶದ ಮಕ್ಕಳು Constructions ಹತ್ತಿರ ಮರಳು ಹೊರುವುದನ್ನು ತೋರಿಸುವುದು, ಗುಂಡಿ ಹೊರುವುದನ್ನು ತೋರಿಸುವುದು,

ನಾನು ಈ advertisements copies ನ್ನು ನಿಮಗೆ ಕಳುಹಿಸುತ್ತೇನೆ. They are inviting, 28 dollars feeds one child, 280 feeds 10 children, 560 feeds 20 children, 1400 feeds 50 children ಇದು advertisement in United States. ಈ ಕಾರ್ಯಕ್ರಮವನ್ನು ಮಾಡುವುದಕ್ಕೆ ನೀವು sponsor ಮಾಡಿ ಇಷ್ಟು dollar ಅನ್ನು ಮಾಡಿ. India ದಲ್ಲಿ ಏನು advertisement ಇದೆ, Pay and just give links. ನಿಮಗೆ 1200 ರೂ. ಕೊಟ್ಟರೆ ಒಂದು ಮಗುವಿಗೆ ನಾವು ಊಟ ಹಾಕುತ್ತೇವೆ, ನೀವು ಕೊಡಿ ಎಂದು ಹೇಳುವುದರ ಜೊತೆಗೆ ಆಕಸ್ಮಾತ್ ಈ ಸಂಸ್ಥೆ ಇಲ್ಲದೇ ಹೋಗಿದ್ದರೆ ಇಡೀ ಭಾರತ ದೇಶ ರೌದ್ರವನರಕ ಆಗುತ್ತಿತ್ತು. ನಾವು ಈ ಕಾರ್ಯಕ್ರಮವನ್ನು 2001 ನೇ ಇಸವಿಯಿಂದ ಮಾಡುವುದಕ್ಕೆ ಮೊದಲೇ ಇಡೀ ಭಾರತ ದೇಶದ ಮಕ್ಕಳು ವಿದ್ಯಾವಂತರಾಗುತ್ತಿರಲಿಲ್ಲ, ಒಪ್ಪೊತ್ತಿಗೂ ಊಟವಿಲ್ಲದೇ ನರಳುತ್ತಿದ್ದರೆಂದು ಹೇಳಿ, ಇಡೀ ಪ್ರಪಂಚದಲ್ಲಿ ಈ ದೇಶವನ್ನು ತೇಜೋವಧೇ ಮಾಡಲಾಗುತ್ತಿದೆ. ಇದಕ್ಕೆ ಬೆಂಗಳೂರು base ಆಗಿದೆ. ನಮಗೆ ಒಂದು ಮಗುವಿಗೆ ಆರು ರೂಪಾಯಿ ಖರ್ಚು ಬರುತ್ತದೆಂದು ಈ ಕಾರ್ಯಕ್ರಮದಲ್ಲಿ ಅವರೂ ಹೇಳಿಕೊಳ್ಳುತ್ತಾರೆ.. ಆರು ರೂಪಾಯಿ ಖರ್ಚನ್ನು ಲೆಕ್ಕ ಹಾಕಿಕೊಂಡು 200 ಚಿಲ್ಲರೆ ದಿವಸಕ್ಕೆ ಇಷ್ಟು ಹಣ ಕೊಡಿ ಎಂದು ಹೇಳುತ್ತಾರೆ.

Never in any brochure, nowhere in the brochure and never in his thought ಕರ್ನಾಟಕ ಸರ್ಕಾರ ಇದಕ್ಕೆ assistance ಕೊಡುತ್ತಿದೆ ಎಂಬ ಒಂದೇ ಒಂದು ಪದವನ್ನು ಬಳಸುವ ದೊಡ್ಡತನವನ್ನು ಅವರು ತೋರಿಸಿಲ್ಲ. ರಾಜಸ್ಥಾನ ಸರ್ಕಾರ ನನಗೆ ಮೂರು ಚಿಲ್ಲರೆ ರೂಪಾಯಿ ಕೊಡುತ್ತಿದೆ ಎಂದು ಅವರು ತೋರಿಸುತ್ತಾರೆ. 3 ರೂಪಾಯಿ 60 ಪೈಸೆ I am getting from Rajasthan Government. ಉಳಿದ 2 ಚಿಲ್ಲರೆ ರೂಪಾಯಿಯನ್ನು ನಾನು ಚಾರಿಟಿಯಿಂದ raise ಮಾಡುತ್ತಿದ್ದೇನೆಂದು ಹೇಳುತ್ತಾರೆ. ನಿಮ್ಮ ಸರ್ಕಾರ ಏನು ಹಣ ಕೊಡುತ್ತಿದೆ, ಅದರ ಬಗ್ಗೆ ಒಂದು ಪದವನ್ನೂ ಈ ರಾಜ್ಯದ ಸರ್ಕಾರದ ಪರವಾಗಿ ಅವರು ಬಳಸಲಿಲ್ಲ. ಇಡೀ ಸ್ಕೀಮನ್ನು ನಾವು charity ಯಲ್ಲಿ ಮಾಡುತ್ತಿದ್ದೇವೆ. ಇಡೀ ಸ್ಕೀಮನ್ನು ಈ ಸಂಸ್ಥೆ ಮಾಡಿದ್ದರಿಂದ ಕರ್ನಾಟಕದ ಮಕ್ಕಳು ಊಟ ಮಾಡುವುದಕ್ಕಾಗಿದೆ. ಇಲ್ಲದಿದ್ದರೆ, ಅವರೆಲ್ಲರೂ ಸತ್ತು ಹೋಗುತ್ತಿದ್ದರು. ಅವರ್‍ಯಾರೂ ಸ್ಕೂಲಿಗೆ ಬರುತ್ತಿರಲಿಲ್ಲ. ಸ್ಕೂಲ್ ಅಟೆಂಡೆನ್ಸ್ ಇಲ್ಲ. ನಾನು ವಿವರಗಳನ್ನು ಕೊಡುತ್ತೇನೆ, ಈಗ ನನ್ನ ಹತ್ತಿರ ಮಾಹಿತಿ ಇಲ್ಲ. ಈ ಸ್ಥಿತಿ ಹೇಳಿ propaganda ಮಾಡಿ crores of rupees are looted. ಬೆಂಗಳೂರಿನಲ್ಲೇ ಎಷ್ಟು ಚಾರಿಟಿಗಳಿಂದ ಇವರು ಕಲೆಕ್ಟ್ ಮಾಡಿದ್ದಾರೆಂಬುದು ನಿಮಗೆ ಗೊತ್ತಿಲ್ಲ. ನಿಮಗೆ ಸೆಕ್ಷನ್ 35 ರ ಕೆಳಗೆ 100% ಕನ್ಸಿಶನ್ ಇದೆ, tax relief ಇದೆ, ಈಗ 80 (g) ನಲ್ಲಿ 50% claim ಮಾಡಬಹುದಾಗಿತ್ತು. ಸೆಕ್ಷನ್ 35 ರ ಕೆಳಗಡೆ Government of India has given them 100 % tax concession. ಅವರ ಎಲ್ಲಾ ಹಣವನ್ನು complete ಆಗಿ waive-off ಮಾಡಿಬಿಟ್ಟಿದೆ. ಸರ್, ಇವರು ಯಾರು? ಏಕೆ ಮಾಡುತ್ತಿದ್ದಾರೆ? ಏನು ಮಾಡುತ್ತಿದ್ದಾರೆ? ಇದರ ಮಾಹಿತಿಗಳೇನಾದರೂ ಈ ಸರ್ಕಾರದ ಮುಂದೆ ಲಭ್ಯವಿದೆಯೇ? ಎಂಬುದು ನನ್ನ ಪ್ರಶ್ನೆಯಾಗಿದೆ. ಇವೆಲ್ಲವನ್ನು ಏಕೆ ಮಾಡುತ್ತಿದ್ದಾರೆ? ಸರ್, ಇವರು ಯಾರು? ತಾವು ಹೇಳಬೇಕು. ಮಧು ಪಂಡಿತ್ ದಾಸ್, ISKCON Karnataka, Bangalore ಗೆ ಇವತ್ತು President ಎಂದು ಹೇಳಿಕೊಂಡಿದ್ದಾರೆ. I dispute it.

ಅಧ್ಯಕ್ಷರು :- ಇಲ್ಲಿ ಯಾರ ಹೆಸರನ್ನೂ ತರಬೇಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಇಲ್ಲ, ಹೇಳಲೇಬೇಕು ಸರ್, It is on record. They have entered into an agreement with him. ಅದೇನೂ ತಪ್ಪಾಗುವುದಿಲ್ಲ. ISKCON Indai ಗೆ ಏನು ಕನೆಕ್ಷನ್? ISKCON India ಗೆ

ಸಂಬಂಧಪಟ್ಟವರೇ ಅಲ್ಲವೆಂದು ಒಂದು ಆದೇಶವಿದೆ. ಈ ISKON Temple ಏನು ಕರ್ನಾಟಕದಲ್ಲಿದೆ, ಈ temple, ISKCON India ದವರಿಗೇ ಸಿಗಬೇಕಾಗಿತ್ತೆಂದು ಇದೆ. ISKCON India ದವರಿಗೂ ಮತ್ತು ಇವರಿಗೂ ಕೇಸ್ ನಡೆದು, Government 12-13 ವರ್ಷಗಳ ಅಕೌಂಟ್ಸ್‌ಅನ್ನು ಇಲ್ಲಿ ಫೈಲ್ ಮಾಡಿದರು. You are not empowered to file income tax assessment or records before this ಎಂದು, ನಿನಗೆ ಅದಕ್ಕೆ ಅಧಿಕಾರವಿಲ್ಲವೆಂದು ಆದೇಶವಾಗಿದೆ.

ಸನ್ಮಾನ್ಯ ಕಾನೂನು ಮಂತ್ರಿಗಳೆ, ಇವರು ಈ local units ಗೆ ಅಧ್ಯಕ್ಷರಾಗಿ ನೇಮಕವಾದರು. 2001 ರಲ್ಲಿ ಇವರು ಏನು ಮಾಡಿದರು ಎಂದರೆ, ಇಡೀ ISKCON ವ್ಯವಸ್ಥೆ ISKCON Of Karnataka ದ್ದೆಂದು declare ಮಾಡಿಕೊಂಡುಬಿಟ್ಟರು. ಹಾಗೆ ಮಾಡುವಾಗ ಏನಾಯಿತೆಂದರೆ, ಅದಕ್ಕೂ ಮೊದಲೇ ISKCON ಅನ್ನು ಬೇರೆಯವರು ಕರ್ನಾಟಕದಲ್ಲಿ register ಮಾಡಿದರು. ಸನ್ಮಾನ್ಯ ಹರಿಖೋಡೆಯಂತಹ ಒಬ್ಬರು ಇವತ್ತು ಜೀವಂತವಾಗಿರುವಂತಹ ಮೆಂಬರ್ ಆಗಿದ್ದಾರೆ. ISKCON, Karnataka ಕ್ಕೂ ಈತನಿಗೂ ಸಂಬಂಧವಿಲ್ಲ, He cannot claim the Society as his own ಎಂದು ಅವರು ಒಂದು dispute ಮಾಡಿದರು. ಇದಾದ ಮೇಲೆ ಏನಾಯಿತೆಂದರೆ, ಒಂದು interim Order pass ಆಯಿತು. ISKCON ಗೂ ನಿಮಗೂ ಸಂಬಂಧವಿಲ್ಲ, Final Order ಆಗುವವರೆಗೂ ನೀವು to the tune of Rs. 5,00,000/- per withdrawal ಖರ್ಚು ಮಾಡಿಕೊಂಡು ಆ ದೇವಸ್ಥಾನವನ್ನು ನಡೆಸಿಕೊಂಡು ಹೋಗಬಹುದು ಅಥವಾ ಅಲ್ಲಿನ ಆಗುಹೋಗುಗಳನ್ನು ನೋಡಿಕೊಳ್ಳಬಹುದು. ಅದರಲ್ಲಿ ಪ್ರಸ್ತಾದಕ್ಕೆ ಬಿಟ್ಟು ಮಿಕ್ಕಿದ ಖರ್ಚಿಗೆ ಎಂದು ಒಂದು Interim Order pass ಆಯಿತು. Interim Order ಅನ್ನು ಇಟ್ಟುಕೊಂಡು he has created eight to ten trust. 8 ರಿಂದ 10 ಟ್ರಸ್ಟ್‌ಗಳು identical trust in which he is the life Managing Trustee and his co-brother is the executive, ಇನ್ನೊಬ್ಬ ಅವರ relative ಇಟ್ಟುಕೊಂಡು Kerala based ಮೂರು ಜನರು ಇವರೇನಿದ್ದಾರೆ, ಈ ಮೂರು ಜನರು 8 ಟ್ರಸ್ಟ್‌ಗಳಲ್ಲಿ ಟ್ರಸ್ಟಿ ಆಗಿ identical, ಆಗಿ ಒಂದೇ objective ಇಟ್ಟುಕೊಂಡು ಟ್ರಸ್ಟ್ ಮಾಡಿಕೊಂಡಿದ್ದಾರೆ.

ಆ ದೇವಸ್ಥಾನಕ್ಕೆ ಬರುತ್ತಿರುವ ಹಣ, ಅಧ್ಯಕ್ಷರೆ, ತಮಗೆ ಗೊತ್ತಾಗಬೇಕು. ತಿರುಪತಿ ಬಿಟ್ಟರೆ, not even Swamy Ayyappan Temple. Swamy Ayyappan Temple ಗಿಂತಲೂ ಜಾಸ್ತಿ income ಇರುವ temple ಇವತ್ತು ಕರ್ನಾಟಕದ ISKCON ಆಗಿದೆ. ತಾವು ಅರ್ಥಮಾಡಿಕೊಳ್ಳಬೇಕು. ತಿರುಪತಿಯನ್ನು ಬಿಟ್ಟರೆ, ಜಾಸ್ತಿ pilgrims ಅನ್ನು ಇವತ್ತು attract ಮಾಡುತ್ತಿರುವ temple ಕರ್ನಾಟಕದಲ್ಲಿರುವ ISKCON ಆಗಿದೆ. ಇಂತಹ ಕಡೆ ಪ್ರತಿ ದಿವಸ 4 ರಿಂದ 5 ಲಕ್ಷ ದುಡ್ಡನ್ನು siphon ಮಾಡಿ ಟ್ರಸ್ಟ್ ಇವರು divert ಮಾಡಿಕೊಂಡರು. ಅದು separate issue, Court ನಲ್ಲಿದೆ. ಆ ISKCON ಹೆಸರಿನಲ್ಲಿ, ಆ ಒಂದು ಭಾವನೆಯನ್ನು, emotional spirit ಅನ್ನು ಬಳಸಿಕೊಂಡು ಇವತ್ತು he is cheating the Government of Karnataka. It is my charge. I am specifically charging. ISKCON ಅನ್ನು, ಯಾವುದನ್ನು ಬಳಸುವುದಕ್ಕೆ ಇವರಿಗೆ authority ಇಲ್ಲವೋ, ISKCON ಹೆಸರು ಹೇಳುವುದಕ್ಕೆ ಕೋರ್ಟ್ ಅವರಿಗೆ ಅಧಿಕಾರವನ್ನೇ ಕೊಟ್ಟಿಲ್ಲ. ಅಂತಹ ಒಬ್ಬ ಮನುಷ್ಯ ಇವತ್ತು ISKCON ಹೆಸರಿನಲ್ಲಿ ಬೆಂಗಳೂರಿನಲ್ಲಿ ಏನೇನು ಮಾಡುತ್ತಿದ್ದಾರೆ, ಅವರಿಗೆ ನೀವೇಕೆ ಈ ಕಾರ್ಯಕ್ರಮವನ್ನು ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ಬಳ್ಳಾರಿ, ಮಂಗಳೂರು ಇಲ್ಲಿಗೆ ವಹಿಸಿಕೊಡುವುದಕ್ಕೆ ಹೊರಟಿರಿ ಎಂಬುದಕ್ಕೆ ನನಗೆ ಇವತ್ತು ಸರ್ಕಾರ ಉತ್ತರ ಹೇಳಬೇಕು.

ನಾನು ಇವತ್ತು ಅಲ್ಲಿಂದ ಮಾಹಿತಿ ತರಿಸಿದ್ದೇನೆ. ಒಂದು ಮಗುವಿಗೆ ಸರ್ಕಾರ ಏನೇನು ಕೊಡುತ್ತಿದೆ, ನೂರು ಗ್ರಾಮ್ ಅಕ್ಕಿ ಕೊಡುತ್ತೀರಿ, 25 ಗ್ರಾಮ್ ಬೇಳೆ ಕೊಡುತ್ತೀರಿ, 3 ಗ್ರಾಮ್ ಎಣ್ಣೆ ಕೊಡುತ್ತೀರಿ, 5 ಗ್ರಾಮ್ ಉಪ್ಪು ಕೊಡುತ್ತೀರಿ, ವರ್ಷಕ್ಕೆ ಎರಡು ಮಾತ್ರೆಗಳನ್ನು ಜಂತುಹುಳು ನಿವಾರಣೆಗಾಗಿ ಕೊಡುತ್ತೀರಿ, ವರ್ಷಕ್ಕೆ ಎರಡು ಮಿಟಮಿನ್ ಮಾತ್ರೆಗಳನ್ನು ಕೊಡುತ್ತೀರಿ, ಇನ್ನು 60 ರಿಂದ 70 ಮಾತ್ರೆಗಳನ್ನು ಬೇರೆ ಬೇರೆ ಉದ್ದೇಶಗಳಿಗಾಗಿ ಕೊಡುತ್ತಿದ್ದೀರಿ. ಅಡುಗೆ ಮಾಡುವವರಿಗೆ, ಒಬ್ಬರಿದ್ದರೆ 650 ರೂಪಾಯಿಗಳನ್ನು ಕೊಡುತ್ತಿದ್ದೀರಿ. ಇಬ್ಬರು ಇರುವ ಕಡೆಗಳಲ್ಲಿ 650 + 400 ರೂಪಾಯಿ ಕೊಡುತ್ತಿದ್ದೀರಿ, ಮೂರು ಜನರಿರುವ ಕಡೆಗಳಲ್ಲಿ 650 + 450 + 350 ರೂಪಾಯಿಗಳನ್ನು ಕೊಡುತ್ತಿದ್ದೀರಿ. ಇದೆಲ್ಲಾ ಸೇರಿದರೂ ನಾಲ್ಕು ರೂಪಾಯಿ, ನಾಲ್ಕೂವರೆ ರೂಪಾಯಿಯೊಳಗೆ ಒಂದು ಮಗುವಿಗೆ ನಮಗೆ ಖರ್ಚು ಬರುತ್ತಿದೆ. Whereas this fellow says, his expenditure is six rupees per head. ಇದಕ್ಕೆ ಇವರು ಏನು ಮಾಡಿದ್ದಾರೆಂದರೆ, ಇಡೀ ವಿಶ್ವದ್ಯಂತ ಮಕ್ಕಳ

ಫೋಟೋ ಹಾಕಿಕೊಂಡು ಇವತ್ತು ಕಲೆಕ್ಟ್ ಮಾಡುತ್ತಿದ್ದಾರೆ, charity rise ಮಾಡುತ್ತಿದ್ದಾರೆ.

ಎಷ್ಟು ಹಣ ಬಂತು? ಎಲ್ಲಿಂದ ಬಂತು? ಯಾರಿಂದ ಬಂತು? ಯಾವುದೇ ಲೆಕ್ಕವನ್ನು ಸರ್ಕಾರಕ್ಕೆ ಕೊಡುತ್ತಿಲ್ಲ. income tax file ಮಾಡುವುದಕ್ಕೆ ಇವರ Income tax returns ಅನ್ನು ಅವರು accept ಮಾಡುತ್ತಿಲ್ಲ. ಇವತ್ತು ಬೆಂಗಳೂರಿನಲ್ಲಿ ಏನಾಗುತ್ತಿದೆಯೆಂದರೆ, Bangalore asset ಅನ್ನು ತಾವು ನೋಡಬೇಕು. ISKCON ಎಂದು ಹೇಳಿ Government ಮುಂದೆ application ಹಾಕಿಕೊಂಡು ಏನೋ ISKCON ನವರು ಬಹಳ ದೊಡ್ಡ ಕಾರ್ಯಕ್ರಮ ಮಾಡುತ್ತಿದ್ದಾರೆಂದು ಸರ್ಕಾರಗಳು ಇವರಿಗೆ ಜಮೀನು ಕೊಡುವುದು, Karnataka Industrial Area Development Board ನಿಂದ ಇವರಿಗೆ acquire ಮಾಡಿಕೊಡುವುದು, tourism development ಮಾಡುತ್ತೇವೆಂದು ಇವರಿಗೆ Tourism Department ನಿಂದ ಕೊಡುವುದು. ಇವತ್ತು ಇವರು ಇದೆಲ್ಲವನ್ನು ಮಾಡಿಕೊಂಡು ಬೆಂಗಳೂರಿನಲ್ಲಿ They have property worth Rs. 2,000 Crores. ತಾವು ನನಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟಾಗ detail ಆಗಿ ಹೇಳುತ್ತೇನೆ. ಏನೇನು ಮಾಡುತ್ತಿದ್ದಾರೆ? ಈಗ Commercial complexes ಕಟ್ಟುತ್ತಿದ್ದಾರೆ, flats ಕಟ್ಟಿಸಿದ್ದಾರೆ. ಬಹುಶಃ ಕನಕಪುರ ರಸ್ತೆಯಲ್ಲಿ 2-3 ಕಡೆಗಳಲ್ಲಿ flats ಕಟ್ಟಿದ್ದಾರೆ. Five Star Hotels ಮಾಡುತ್ತಿದ್ದಾರೆ, ಇದರ ಜೊತೆಗೆ Recreation Clubs ಮಾಡುತ್ತಿದ್ದಾರೆ. ಇಷ್ಟೇ ಅಲ್ಲದೇ, ನಮ್ಮಲ್ಲಿ 25 ಎಕರೆಗಳಷ್ಟು ಒಂದು ಗುಡ್ಡ ತೆಗೆದುಕೊಂಡಿದ್ದಾರೆ. ಅದು ISKCON ಹೆಸರಿನಲ್ಲಿ grant ಆಗಿದೆ. ಅಲ್ಲೊಂದು Guest House ಕಟ್ಟಿ, value addition ಆಗಲೆಂದು ಕಾಯುತ್ತಿದ್ದಾರೆ. ನಿಮ್ಮ ವಸಂತಪುರ ಅಥವಾ ಯಾವುದೋ ಊರಿನಲ್ಲಿ ಒಂದಷ್ಟು land acquire ಮಾಡಿದ್ದಾರೆ. ಇನ್ನು 18 ಎಕರೆಗಳೆಷ್ಟು ಕೊಡಿ ಎಂದು ಅವರು ನಿಮ್ಮನ್ನು ಈಗಾಗಲೇ ಕೇಳಿಕೊಂಡಿದ್ದಾರೆ.

ಅಂಗಡಿ ಇದೆ, ಮನೆ ಇದೆ, ಇದೆಲ್ಲವನ್ನೂ ನನಗೆ acquire ಮಾಡಿಕೊಡಿ ಎಂದು ಕೆಐಎಡಿಬಿ ಮುಂದೆ ಅವರ File move ಆಗಿದೆ. ನಾಳೆ, ನಾಡಿದ್ದರಲ್ಲಿ ಮಂಜೂರಾಗುವ ಸ್ಥಿತಿ ನಿರ್ಮಾಣವಾಗಿದೆ. ಇವರು ಎಲ್ಲಿಯವರೆಗೆ ಬಂದಿದ್ದಾರೆಂದರೆ, ಇವರ ಜೊತೆಗೆ ಒಂದಷ್ಟು ಟ್ರಸ್ಟಿ ಸೇರಿಕೊಂಡಿದ್ದಾರೆ. ಇವತ್ತು ಇದೆಲ್ಲವನ್ನೂ ಶಾಸನಸಭೆಯಲ್ಲಿ ಚರ್ಚೆ ಮಾಡಬೇಕಾಗಿದೆ. ಸಾರ್ವಜನಿಕರ ಹಣ ಯಥೇಚ್ಛವಾಗಿ involve ಆಗಿದೆ. ನೀವು ಬೆಂಗಳೂರು ಒಂದರಲ್ಲೇ 1 ಲಕ್ಷ ಚಿಲ್ಲರೆ ಮಕ್ಕಳಿಗೆ

food ಕೊಡುವಂಥ ಕಾರ್ಯಕ್ರಮವನ್ನು ಇವರಿಗೆ ವಹಿಸಿಕೊಟ್ಟಿದ್ದೀರಿ. ಮತ್ತೆ ಇವರು Food Farewell Parties ಎಂದು ಕರೆಯುತ್ತಿದ್ದಾರೆ. ಊಟಕ್ಕೆ ಕರೆಯುವಾಗ ಏನು ಹೇಳುತ್ತಾರೆ. 'ದಯಮಾಡಿ ಊಟಕ್ಕೆ ಬನ್ನಿ, ಒಂದು ಊಟಕ್ಕೆ ಒಬ್ಬರಿಗೆ 280 ರೂಪಾಯಿ ಚಾರ್ಜ್ ಮಾಡುತ್ತಿದ್ದೇವೆ. ಒಂದು ಕುಟುಂಬಕ್ಕೆ ಇಷ್ಟು ಚಾರ್ಜ್ ಮಾಡುತ್ತಿದ್ದೇವೆ ಇದರಲ್ಲಿ ಊಟ ಮಾಡಿದ್ದನ್ನು ನಾವು ಇಂತಿಂಥ ಕಾರ್ಯಕ್ರಮಗಳಿಗೆ ಬಳಸುತ್ತೇವೆ' ಎಂದು ಹೆಳುತ್ತಾರೆ. ಅದರ ಜೊತೆಗೆ ಮನಸ್ಸು ನೋಯುವಂತಹ ಒಂದು advertisement ಕೊಡುತ್ತಾರೆ. ನಾವೆಲ್ಲರೂ ಈ ನಾಗರಿಕ ಸಮಾಜದಲ್ಲಿರಬಾರದು. ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನು ಇಲ್ಲಿ allow ಮಾಡುವುದಿಲ್ಲ. You are censured ಎಂದು ಬರೆಯುತ್ತಾರೆ.

ಅವರು ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನು ಅಲ್ಲಿ allow ಮಾಡುವುದಿಲ್ಲವಂತೆ. ಊಟಕ್ಕೆ ಬರುವವರು ಏನೂ ಅಂದುಕೊಳ್ಳಬೇಕಾಗಿಲ್ಲವಂತೆ. ದಯಮಾಡಿ ಬನ್ನಿ ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನು ಇಲ್ಲಿ ಬಡಿಸುವುದಿಲ್ಲವಂತೆ.

ನಾವು ನಿಮ್ಮ ಸಮಾಜದಲ್ಲಿ ಇನ್ನೂ ಶೂದ್ರರೇ, ಈರುಳ್ಳಿ ಬೆಳ್ಳುಳ್ಳಿ ತಿನ್ನುವವರನ್ನು ಇನ್ನು ಆಚೆಯೇ ಇಟ್ಟಿದ್ದೀರಿ. ಒಂದು ಸಂಸ್ಕೃತಿ ಇರುವ ರಾಜ್ಯದಲ್ಲಿ ads ಈ ರೀತಿಯದನ್ನು ಕೊಡುತ್ತೀರಿ. ನೀವು ಕೊಡುತ್ತಿರುವ ಊಟ ಎಂತಹದ್ದು? ನಮ್ಮ ಮಕ್ಕಳನ್ನು ನೀವೇನು ಬೆಳೆಸುತ್ತಿದ್ದೀರಿ, ನಾಳೆ ಆ ಮಕ್ಕಳ feeding habits ಏನಾಗುತ್ತದೆ? ನಾಳೆ ನಮ್ಮಗತಿಯೇನು ಎಂಬ ಮೂಲಭೂತ ಪ್ರಶ್ನೆ ಬರುತ್ತದೆ. Yes, ನನ್ನ ಮಗ He is supposed to eat ಈರುಳ್ಳಿ, ನಾನು ಅವನಿಗೆ ಈರುಳ್ಳಿಯನ್ನು ಬಲವಂತವಾಗಿ ತಿನ್ನಿಸುತ್ತೇನೆ, ನಾನು A onion a day keeps the doctor away ಎಂದು ತಿಳಿದುಕೊಂಡಿದ್ದೇನೆ, ಆದರೆ ಇಲ್ಲಿ ತಿನ್ನುವಂತಿಲ್ಲ. ನೀವೇನು 5 ಲಕ್ಷ ಮಕ್ಕಳಿಗೆ ಊಟ ಕೊಡುತ್ತಿದ್ದೀರಿ so, you are feeding the same food ಹಾಗಾದರೆ ನಮ್ಮ ಲೋಕಲ್ ಹ್ಯಾಬಿಟ್ ಏನಾಗಬೇಕು? ಟೇಸ್ಟ್ ಏನಾಗಬೇಕು? ನಾವಿಲ್ಲಿ ಬೆಳೆಯುತ್ತಿರುವ ಪದಾರ್ಥಗಳೇನಾಗಬೇಕು? ರಾಗಿ, ಈರುಳ್ಳಿ, ಬೆಳ್ಳುಳ್ಳಿ ಎಲ್ಲಿಗೆ ಕಳುಹಿಸಬೇಕು? ನಾವೆಲ್ಲಿ ಹೋಗಬೇಕು? ಈ ರಾಜ್ಯಕ್ಕೆ ಇದರದ್ದೇ ಆದ feeding habit ಇದೆ. ಅದಕ್ಕೆ ತಕ್ಕಂತೆ agriculture pattern ಇದೆ. ನಾವೇನು ಬೆಳೆಯುತ್ತಿದ್ದೇವೆ ಅದನ್ನು ನಾವು ತಿನ್ನುವುದು ಎಂದು ತಿಳಿದುಕೊಂಡು ಬೆಳೆಯುತ್ತಿದ್ದೇವೆ. ಇದನ್ನು ದನ ತಿನ್ನುವುದು ಎಂದು ತಿಳಿದುಕೊಂಡು ಬೆಳೆಯುತ್ತಿಲ್ಲ. ಹಾಗಾದರೆ ನಾವು ಈ ರಾಜ್ಯದಲ್ಲಿ ಬೆಳೆಯುವುದೆಲ್ಲ ದನ ತಿನ್ನುವುದೇ? ಇಂತಹದನ್ನೆಲ್ಲ

ಹೇಳುವುದಕ್ಕೆ Government agency ಯಲ್ಲಿ supply ಮಾಡುವುದಕ್ಕೆ ಅವಕಾಶ ಕೊಡುತ್ತೀರ? ಇದೆಲ್ಲ ಇಲ್ಲಿ ಚರ್ಚೆಯಾಗಬೇಕು.

ಅಧ್ಯಕ್ಷರು :- ಅವರ activities ಬಗ್ಗೆ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಅಲ್ಲಿಗೆ ಬರುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಮಾನ್ಯ ಅಧ್ಯಕ್ಷರೆ, ಬೇರೆ activites ಇರಲಿ, ಸರ್ಕಾರವೇ ಅವರಿಗೆ ಅನುಮತಿ ಕೊಟ್ಟಿದ್ದಾರೆಂದರೆ... ಅದು ಸರಿಯಿಲ್ಲ. ಮಾನ್ಯ ಮಾಧುಸ್ವಾಮಿಯವರು ವಿಧಾನ ಸಭೆಯಲ್ಲಿ ಅದರ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ಕೊಡುತ್ತಿದ್ದಾರೆ. ಇದರ ಬಗ್ಗೆ ಚರ್ಚೆಯಾಗಲೇ ಬೇಕು. ಈಗಾಗಲೇ ಈರುಳ್ಳಿ ಬೆಲೆ ಇಳಿದುಹೋಗಿದೆ. ಇಸ್ಕಾನ್‌ನವರು ಈರುಳ್ಳಿ ತಿನ್ನಬೇಡಿ ಎಂದು ಹೇಳಿದರೆ ಈರುಳ್ಳಿಯನ್ನು ಏಕೆ ಬೆಳೆಯಬೇಕು? ಈರುಳ್ಳಿಯನ್ನು ನಿಷೇಧ ಮಾಡಿಬಿಡಿ. ಸುಮ್ಮನೆ ಚರ್ಚೆಯಾಗುತ್ತದೆ, ಯಾರಾದರೂ ಸದಸ್ಯರು ತಮ್ಮ ಅಭಿಪ್ರಾಯವನ್ನು ಹೇಳುವ ಸಂದರ್ಭದಲ್ಲಿ ತಾವು ಅದನ್ನು ದಯವಿಟ್ಟು ಗಂಭೀರವಾಗಿ ಪರಿಗಣಿಸಬೇಕೆಂದು ಒತ್ತಾಯ ಮಾಡುತ್ತೇನೆ.

(ಗೊಂದಲ)

ಶ್ರೀ ಎಸ್.ಎಲ್. ಧರ್ಮೆಗೌಡ :- ಮಾನ್ಯ ಮಾಧುಸ್ವಾಮಿಯವರಿಗೆ ಮಾತನಾಡಲು ಅವಕಾಶ ಕೊಟ್ಟಮೇಲೆ ಅದು ಪ್ರಯೋಜನವಾಗಬೇಕು. ಅವರಿಗೆ ಮಾತನಾಡಲು ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಗೃಹ ಸಚಿವರಿಗೆ ಈ ಬ್ರೋಚರನ್ನು ಕಳುಹಿಸುತ್ತೇನೆ. ನಮ್ಮ ಮಕ್ಕಳನ್ನು ಫಾರಿನ್‌ನಲ್ಲಿ ತೋರಿಸುತ್ತಿರುವ ರೀತಿ ಇದು. This is the way our children are exhibited in Europe, America, Egypt. ಇಟ್ಟಿಗೆ ಹೊರಿಸಿ, ಬಿದ್ದು ಹೋಗುತ್ತಿರುವ ಮನೆ ಕೆಳಗೆ ನಿಂತುಕೊಂಡು ಈ ಮಕ್ಕಳು ಈ ರೀತಿಯಾಗಿದ್ದಾರೆಂದು ತೋರಿಸುತ್ತಿದ್ದಾರೆ and this is the add he gives. ಅಲ್ಲಿ ಒಬ್ಬರಿಗೆ appointment ಮಾಡಿಬಿಟ್ಟಿದ್ದಾರೆ. To see that funds are collected. ನಿಮ್ಮ ಮಕ್ಕಳು ಇರುವುದು ಹೀಗೆ, ನಮಗೇನು ಸ್ವಾಭಿಮಾನವಿಲ್ಲವೇ? ನಾವು ಈ ದೇಶದ ಮಕ್ಕಳಲ್ಲವೇ? ಪ್ರಜೆಗಳಲ್ಲವೇ? ನಾವು ಕೆಟ್ಟ ಭಾಷೆಯನ್ನು

ಬಳಸಬೇಕಾಗುತ್ತದೆ. ನಮಗೆ ಇದುವರೆಗೆ ಇವರೇ ಅನ್ನ ಹಾಕಿಕೊಂಡಿದ್ದಾರೆಯೇ? ನಮ್ಮ ಮಕ್ಕಳನ್ನು ಸಾಕುವ ಯೋಗ್ಯತೆ ನಮಗಿಲ್ಲವೇ? ಈ ಸ್ಥಿತಿಯಲ್ಲಿ ನಮ್ಮನ್ನು ವಿದೇಶಗಳಲ್ಲಿ ತೋರಿಸಿ ದುಡ್ಡನ್ನು ಲೂಟಿಮಾಡಿಕೊಂಡು ಬಂದು ರಿಯಲ್ ಎಸ್ಟೇಟ್ ಮಾಡುವವರಿಗೆ ನೀವು ಇವತ್ತು ಅಕ್ಷರ ದಾಸೋಹ ಕಾರ್ಯಕ್ರಮವನ್ನು ವಹಿಸುತ್ತೀರ? ಇದರ ಜೊತೆಗೆ ಇನ್ಫೋಸಿಸ್‌ನ ನಾರಾಯಣಮೂರ್ತಿಯವರು, ಅವರಿಗೆ ಪದ್ಮಭೂಷಣ ಕೊಡಬೇಕಾಗಿತ್ತು, ಇವರು ಇಲ್ಲದಿದ್ದರೆ ಲಕ್ಷಾಂತರ ಮಕ್ಕಳು starvation death ಸತ್ತು ಹೋಗುತ್ತಿದ್ದರು, ಊಟವಿಲ್ಲದೇ ಸತ್ತು ಹೋಗುತ್ತಿದ್ದರು ಎಂದು ರಾಜಸ್ಥಾನದಲ್ಲಿ ನಿಂತು ಭಾಷಣ ಮಾಡುತ್ತಾರೆ.

ಇವರು ಇಲ್ಲದಿದ್ದರೆ ನಮ್ಮ ಲಕ್ಷಾಂತರ ಮಕ್ಕಳು starvation death ಸಾಯುತ್ತಿದ್ದರಂತೆ. ಹಾಗಾದರೆ 2001 ರಿಂದ ಈ ಕಾರ್ಯಕ್ರಮ ಪ್ರಾರಂಭವಾಗಿದ್ದು? ಯೂನಿಸೆಫ್‌ನವರು ಬಂದು ನಿಮಗೆ milk powder, ರವೆ ಕೊಟ್ಟರು. ನಾವು ಇವತ್ತು ಜಿ-7 ನಿಂದ ಜಿ-8 ಗೆ ಕಾಂಪಿಟೇಷನ್ ಇರುವ ರಾಷ್ಟ್ರ ಚೀನಾ ಜೊತೆ ಇಂಡಿಯಾ ಕಾಂಪಿಟ್ ಮಾಡುವ ದೇಶವೆಂದು ಪ್ರಪಂಚಕ್ಕೆ ತೋರಿಸಿಕೊಂಡು ಬರುತ್ತಿರುವವರು ಊಟಕ್ಕೆ ಇಲ್ಲದೆ ಲಕ್ಷಾಂತರ ಮಕ್ಕಳು ಸಾಯುತ್ತಿದ್ದಾರೆಂದು ಹೊರಗಡೆ ad ಕೊಡುವವರಿಗೆ ಸರ್ಕಾರದಿಂದ ನೀವು ಸಹಾಯ ಮಾಡಿಕೊಂಡು ನಮ್ಮ ದುಡ್ಡು ಎಲ್ಲಿ ಹೋಯಿತು, ಏನಾಯಿತು ಎಂದು ರೂಪಾಯಿ ಲೆಕ್ಕ ಇದುವರೆಗೆ ಕೇಳಿಲ್ಲ. Do you know his turn over is 60 crores! ಅವರು ಮಾಡುತ್ತಿರುವ ಅಕ್ಷಯ ಪಾತ್ರೆ ಕಾರ್ಯಕ್ರಮದಲ್ಲಿ 60 ಕೋಟಿ turn over ಆಗಿದೆ. Yes. What is the charity? What is the accounted money? What is the Government's contribution? ಯಾರು ಕೇಳಿದ್ದೀರಿ? ಇವರನ್ನು ಇವತ್ತು ಇಡೀ ರಾಜ್ಯಕ್ಕೆ ಮನಾಪಲಿ ಮಾಡಲು ಅವಕಾಶ ಕೊಟ್ಟಿದ್ದೀರಿ. The need of the hour is ಇವರಿಗೆ ಇಡೀ ರಾಜ್ಯದ ವ್ಯವಸ್ಥೆಯನ್ನು ವಹಿಸಿಕೊಡುವ ಹುನ್ನಾರ ಈ ಸರ್ಕಾರದಲ್ಲಿ ನಡೆಯುತ್ತಿದೆ.

ಇದು ಗೊತ್ತಾಗಿ ನಿನ್ನೆ 7 ಸಾವಿರ ಹೆಣ್ಣುಮಕ್ಕಳು ಬೀದಿಗೆ ಬಂದು ನಿಂತಿದ್ದಾರೆ. ಹಳ್ಳಿಯಲ್ಲೆಲ್ಲ ಈ ರೀತಿ ಮಾಡುತ್ತಿದ್ದೀರೆಂದು ನಿಂತಿದ್ದಾರೆ. ಇದು ಬಿಸಿ ಊಟ ಹೇಗೆ ಆಗುತ್ತದೆ. ಒಂದು ಕಡೆ ಮೆಷಿನ್ ಇಟ್ಟುಕೊಂಡು ಲಕ್ಷಾಂತರ ಮಕ್ಕಳಿಗೆ ಅಡುಗೆ ಮಾಡಿ 40-50 ಕಿಲೋಮೀಟರ್ ವೆಹಿಕಲ್‌ನಲ್ಲಿ ತೆಗೆದುಕೊಂಡು ಹೋಗುತ್ತೀರಿ, packed food ತೆಗೆದುಕೊಂಡು ಹೋಗುತ್ತಿರುತ್ತೀರಿ, moisture evaporate ಆಗಿ

ಮೇಲುಗಡೆ collect ಆಗಿರುತ್ತದೆ. ಅದು ಬಿಸಿ ಅನವೇ? ಬಿಸಿ ಸಾಂಬಾರೆ? ಹಾಗಾದರೆ ನಾವ್ಯಾರು frozen food, packed food ನ್ನು ತಿಂದು ಬೆಳೆದೇ ಇಲ್ಲವೆ? ಎಲ್ಲಿಯವರೆಗೆ ಇವರು cater ಮಾಡುತ್ತಾರೆ? How long he is supposed to cater a day ? 60–70 ಕಿಲೋಮೀಟರ್ ಮಾಡಿಸುತ್ತೀರ? ಎಷ್ಟು ಕಿಲೋಮೀಟರ್ ನಿಂದ ನಮ್ಮ ಮಕ್ಕಳಿಗೆ ಊಟ ಕೊಡಿಸುತ್ತೀರ ಹೇಳಬೇಕು? Who is he to use the name of ISKCON ? ಇಸ್ಕಾನ್ ಪದವನ್ನು ಬಳಸಲು ಇವರಿಗೆ ಅಧಿಕಾರ ಕೊಟ್ಟವರು ಯಾರು? When matter is pending before Supreme Court of India. ಇವರು ಬಂದು ಇಸ್ಕಾನ್ ಹೆಸರಿನಲ್ಲಿ ಇಲ್ಲ ಚಾರಿಟಿ ತೆಗೆದುಕೊಂಡು, ISKCON petition on IT assements dismissed. ISKCON Karnataka ಎಂದು ಇವರು ಹೇಳುವುದು. He is not even Iskcon Karnataka member. It is a registered Society

ರಿಜಿಸ್ಟ್ರಾರ್‌ರವರಿಂದ ಮಾಹಿತಿ ತರಿಸಿ. ಯಾರದು ISKCON Karnataka, ISKCON India ಯಾರದು, ಇವರು ಎಲ್ಲಿಂದ ಬಂದರು, ಇವರು 2001 ನೇ ಇಸವಿಯಲ್ಲಿ ಇದನ್ನು claim ಮಾಡುವುದಕ್ಕೆ ಮೊದಲು ಏನಾಗಿದ್ದರು, ಇವರು ಕೇರಳಾದಲ್ಲಿ ಏನಾಗಿದ್ದರು, ಇಲ್ಲಿ ಬಂದು president ಮಾಡಿದವರು ಯಾರು? On whose behalf he was filing the IT returns? ಇದೆಲ್ಲವು ಇವತ್ತು ತನಿಖೆಗೆ ಒಳಪಡಬೇಕಾಗಿದೆ. ನಾನು ಈ Government ನ್ನು demand ಮಾಡುತ್ತಿದ್ದೇನೆ, Whatever scheme is given to Akshaya Patre this has to be stopped. He cannot be further given this scheme. ನಮ್ಮ ಸರ್ಕಾರದ ಬಗ್ಗೆ ಒಂದು ಒಳ್ಳೆಯ ಪದವನ್ನು ಮಾತನಾಡಲು ಶಕ್ತಿ, ಮನಸ್ಸು ಇಲ್ಲದಿರುವ ವ್ಯಕ್ತಿ ಕರ್ನಾಟಕವನ್ನು ಲೂಟಿ ಮಾಡುತ್ತಿದ್ದಾನೆ. ತಾವು ಅವಕಾಶ ಕೊಟ್ಟರೆ ಬೆಂಗಳೂರಿನಲ್ಲಿರುವ ಅವರ ಪ್ರಾಪರ್ಟಿ ಅಸೆಸ್‌ಮೆಂಟ್ ಏನಿದೆ ಎಂಬುದನ್ನು ಓದುತ್ತೇನೆ. ಏಕೆಂದರೆ preliminary briefing ನಲ್ಲಿ ಬಹಳ ಮಾತನಾಡಬಾರದು ಎಂದು ಇದೆ.

ಅಧ್ಯಕ್ಷರು :– ಮಾನ್ಯ ಮಾಧುಸ್ವಾಮಿಯವರೆ you have taken 25 minuts already.

(ಗೊಂದಲ)

ಶ್ರೀ ಎಸ್.ಎಲ್. ಧರ್ಮೇಗೌಡ :- ಅವರಿಗೆ ಅದನ್ನು ಓದಲು ಅವಕಾಶ ಕೊಡಿ.

ಡಾ|| ಕೆ. ಅನ್ನದಾನಿ :- ಅವರಿಗೆ ಅದನ್ನು ಹೇಳಲು ಅವಕಾಶ ಕೊಡಿ. ತಾವು ಅದನ್ನು ಹೇಳಿ.

(ಗೊಂದಲ)

ಅಧ್ಯಕ್ಷರು :- ಬಹಳಷ್ಟು ಗಂಭೀರವಾದ ವಿಷಯಗಳಿದೆ, ಬಿಲ್ಲುಗಳಿದೆ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ಕೊನೆಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಈಗ ಮಾನ್ಯ ಮಾಧುಸ್ವಾಮಿಯವರೆ ವಿವರಣೆ ಕೊಡಬಹುದು. ಏಕೆಂದರೆ ಬಿಲ್ಲುಗಳು, ವಿರೋಧ ಪಕ್ಷದ ನಾಯಕರು ಕೊಟ್ಟಿರುವ ಪ್ರಿವಿಲೇಜ್ ನೋಟೀಸ್, ಬೇರೆ ಬೇರೆ ವಿಷಯಗಳಿವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾನೂ ಸಹಿ ಮಾಡಿದ್ದೇನೆ.

ಅಧ್ಯಕ್ಷರು :- ತಾವೂ signatory. ಆದರೆ, sufficient time has been given to Mr. Madhuswamy. ಕೊನೆಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಈಗ ನೀವೂ ಮಾತನಾಡಿ. ಬೇರೆಯವರು ಮಾತನಾಡಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ :- ತಾವು ಇದೊಂದು prima facie case ಇದೆ ಎಂದು consider ಮಾಡಿ ಈ adjournment motion allow ಮಾಡಬೇಕು. ನಮ್ಮ ಹತ್ತಿರ ಬಹಳ ಮಾಹಿತಿಗಳಿವೆ. ನಿಯಮದ ಮಿತಿ ನನಗೆ ಗೊತ್ತು. ಆದ್ದರಿಂದ ನಾನು ತಮ್ಮ ಮಿತಿಯಲ್ಲಿ ಇದರ ಬಗ್ಗೆ ಬ್ರೀಫ್ ಮಾಡಿದ್ದೇನೆ. ವಿವರವಾಗಿ ಮಾತನಾಡಲು ತಾವು adjournment motion ನ್ನು accept ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :- ನಾನು ಇದಕ್ಕೆ ಕೊನೆಯಲ್ಲಿ ಅವಕಾಶ ಮಾಡಿಕೊಡುತ್ತೇನೆ. ನೀವು ದಯಮಾಡಿ ಸಹಕರಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾವು ಇದಕ್ಕೆ signatories, preliminary submission ಗೆ ಅವಕಾಶ ಕೊಡಿ.

ಅಧ್ಯಕ್ಷರು :– ಮಾನ್ಯ ಶ್ರೀರಾಮರೆಡ್ಡಿಯವರೆ, ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ನಾನು ಕೊನೆಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಆಗ ನೀವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ನಾನು, ಜಯಪ್ರಕಾಶ್ ಹೆಗ್ಡೆಯವರೆಲ್ಲರು signatories, ಇದ್ದೇವೆ.

ಅಧ್ಯಕ್ಷರು :– ಅದನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ನಾವು preliminary submission ಹೇಳಬೇಕು.

ಅಧ್ಯಕ್ಷರು :– ಎಲ್ಲರನ್ನು ಕೇಳಬೇಕೆಂದಿಲ್ಲ. ಮಾಧುಸ್ವಾಮಿಯವರು sufficient ಆಗಿ ಎಲ್ಲ ವಿಚಾರಗಳನ್ನು ಹೇಳಿದ್ದಾರೆ. ನಾನು ಕೊನೆಯಲ್ಲಿ ಅವಕಾಶ ಕೊಟ್ಟಾಗ ಇನ್ನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಹಾಗಾದರೆ ನಮಗೆ ಈಗ allow ಮಾಡುತ್ತೀರಿ? ನಮಗೆ ಈಗ allow ಮಾಡುವುದಾದರೆ detail ಆಗಿ ಮಾತನಾಡುತ್ತೇವೆ.

ಅಧ್ಯಕ್ಷರು :– ಮಧ್ಯಾಹ್ನದ ಮೇಲೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಜಿ.ವಿ ಶ್ರೀರಾಮರೆಡ್ಡಿ :– ಮಧ್ಯಾಹ್ನದ ಮೇಲೆ ಕೊಡುವುದಾದರೆ ನಮಗೂ ಅವಕಾಶ ಕೊಡಿ. ಆದರೆ ಈಗ preliminary submission ಗೆ ಅವಕಾಶ ಕೊಡಿ.

ಅಧ್ಯಕ್ಷರು :– ಎಲ್ಲರಿಗೂ ಕೊಡಬೇಕೆಂದರೆ ಹೇಗಾಗುತ್ತದೆ? ಬೇರೆ ಬೇರೆ ಮುಖ್ಯವಾದ ವಿಚಾರಗಳೆಲ್ಲ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಆವತ್ತು ಸಭೆಯಲ್ಲಿ ಇವತ್ತು ಬೇರೆ ಯಾವುದನ್ನೂ ತೆಗೆದುಕೊಳ್ಳುವುದಿಲ್ಲ ಕೇವಲ ಸದಸ್ಯರದ್ದನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದೀರಿ.

ಅಧ್ಯಕ್ಷರು :– ಆವತ್ತು ಹೇಳಿದ್ದು ಆಯಿತು. ಈಗ ಬಿಲ್ಲುಗಳು ಪಾಸ್ ಆಗಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಬಿಲ್ಲು ಆಗಿಲ್ಲವೆಂದರೆ ನಾವು ಜವಾಬ್ದಾರರಲ್ಲ. ಅದಕ್ಕೆ ಸರ್ಕಾರ ಜವಾಬ್ದಾರಿ. ನಾವು signatories ಆಗಿದ್ದೇವೆ ನಮಗೆ ಅವಕಾಶ ಕೊಡದಿದ್ದರೆ ಹೇಗೆ?

ಅಧ್ಯಕ್ಷರು :- ಕೊಡುತ್ತೇನೆ ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಜನರಲ್ ಆಗಿ ಅವಕಾಶ ಕೊಡುವುದು ಬೇರೆ. ಆದರೆ preliminary submission ಗೆ ಅವಕಾಶ ಕೊಡಬೇಕು.

ಅಧ್ಯಕ್ಷರು :- ಎಲ್ಲರಿಗೂ preliminary submission ಗೆ ಅವಕಾಶ ಕೊಡಲು ಆಗುತ್ತದೆಯೇ? 20 ಜನರು ಸಹಿ ಮಾಡುತ್ತಾರೆ. ಅವರೆಲ್ಲರಿಗೂ ಕೊಡಲು ಆಗುತ್ತದೆಯೇ? Sufficient time has been given to Mr Madhuswamy.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮಾಧುಸ್ವಾಮಿಯವರಿಗೆ ಅವಕಾಶ ಕೊಟ್ಟಿದ್ದೀರಿ. ಅದಕ್ಕೆ ನಾವು ಸಹಿ ಮಾಡಿದ್ದೇವೆ.

ಅಧ್ಯಕ್ಷರು :- ತಾವು ಸೀನಿಯರ್ ಮೆಂಬರ್, ಈ ರೀತಿ ಮಾತನಾಡುವುದು ಬೇಡ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾವು ಮಾತನಾಡಿದರೆ ಸೀನಿಯರ್ ಮೆಂಬರ್ ಎಂದು ಹೇಳುತ್ತೀರಿ. ನಾವು ಅದಕ್ಕೆ ಸಹಿ ಮಾಡಿದ್ದೇವೆ. ಅದರ ಬಗ್ಗೆ ನಾವು preliminary submission ನಲ್ಲಿ ಮಾತನಾಡುವುದು ಬೇಡವೇ?

ಅಧ್ಯಕ್ಷರು :- preliminary submission ನಲ್ಲಿ ಎಲ್ಲರಿಗೂ ಕೊಡಬೇಕೆಂದೇನಿಲ್ಲ. ನಾವು ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಕೊಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನೀವು ಹೀಗೆಲ್ಲ ಮಾಡುವುದಾದರೆ ನಾವು ಚರ್ಚೆಗೆ ready ಯಾಗಿದ್ದೇವೆ. ಆದರೆ ನೀವು ಮಧ್ಯಾಹ್ನ ಅವಕಾಶ ಕೊಡುವುದಾದರೆ ಈಗ preliminary submission ಗೆ ಅವಕಾಶ ಕೊಡಬೇಕಾಗುತ್ತದೆ.

ಅಧ್ಯಕ್ಷರು :- ಎಲ್ಲವನ್ನು ನೀವು ಹೇಳಿದಂತೆ ನಾನು ಕೇಳಬೇಕು. ಯಾರು ಗಲಾಟೆ ಮಾಡುತ್ತಾರೆ ಅವರಿಗೆ ಮೊದಲು ಕೊಡಬೇಕು. ಯಾರು ಗಲಾಟೆ ಮಾಡುವುದಿಲ್ಲ ಅವರಿಗೆ ಹಿಂದಕ್ಕೆ ಇಡಬೇಕು. This is not correct. Sufficient time has been given. ಮುಂದೆ ಹೋಗೋಣವೆಂದರೆ ಅವಕಾಶವನ್ನೇ ಕೊಡುತ್ತಿಲ್ಲವಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನೀವು allow ಮಾಡುವುದಾದರೆ ನಾವು ಚರ್ಚೆಗೆ ready ಯಾಗಿದ್ದೇವೆ. ಆದರೆ ಮಧ್ಯಾಹ್ನ ಮಾಡುವುದಾದರೆ ನಮಗೆ preliminary submission ಗೆ ಅವಕಾಶ ಕೊಡಿ.

ಅಧ್ಯಕ್ಷರು :- ಇದಕ್ಕೆ ನಾನು ಅವಕಾಶ ಕೊಡುತ್ತೇನೆ. I will fix up the time. Not now. I will give, today only. It is not correct. ಏನಾಗಿದೆ ಎಂದರೆ, sufficient time has been given. ಮುಂದಕ್ಕೆ ಹೋಗೋಣ ಎಂದರೆ, ನೀವು ಅದಕ್ಕೆ ಅವಕಾಶವನ್ನೇ ಕೊಡುತ್ತಿಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನೀವು adjournment motion allow ಮಾಡುವುದಾದರೆ ನಾವು ಚರ್ಚೆಗೆ ರೆಡಿ ಇದ್ದೇವೆ. ಹಾಗಿದ್ದರೆ ನಮಗೇನು preliminary submission ಗೆ ಅವಕಾಶ ಬೇಕಾಗಿಲ್ಲ.

(ಗೊಂದಲ)

ಅಧ್ಯಕ್ಷರು :- ಇದನ್ನು ಚರ್ಚಿಸಲು I will fix the time allow it now. I will allow discussion todey itself.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನೀವು adjournment motion allow ಮಾಡಿದೀರೋ, ಇಲ್ಲವೋ ಎಂಬುದನ್ನಾದರೂ ಹೇಳಬೇಕಲ್ಲವೇ?

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್ :- ಮಾನ್ಯ ಅಧ್ಯಕ್ಷರೆ, I am on a point of order.

(ಗೊಂದಲ)

ಅಧ್ಯಕ್ಷರು :- ಮಾನ್ಯ ರಮೇಶ್‌ಕುಮಾರ್‌ರವರೆ, ತಾವು point of order ಏನೆಂಬುದನ್ನು ಹೇಳಿ.

(ಗೊಂದಲ)

ಡಾ॥ ಕೆ. ಅನ್ನದಾನಿ :- ಮಾನ್ಯ ಅಧ್ಯಕ್ಷರೆ, ಇಸ್ಕಾನ್ ಸಂಸ್ಥೆ ಬಗ್ಗೆ ಚರ್ಚಿಸಲು ದಯಮಾಡಿ ಅವಕಾಶ ಕೊಡಿ. ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ......

ಅಧ್ಯಕ್ಷರು :– ನೀವು ಈ ತರಹ ಮಾತನಾಡುವುದು ಸರಿಯಿಲ್ಲ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಆಯಿತು, ಕೊಡೋಣ. ಯಾವಾಗ ಚರ್ಚೆಗೆ ಅವಕಾಶ ಕೊಡಬೇಕು ಎಂಬುದು ನನ್ನ ವಿವೇಚನೆಗೆ ಬಿಟ್ಟಿದ್ದು.

(ಗೊಂದಲ)

ಡಾ|| ಕೆ. ಅನ್ನದಾನಿ :– ಕರ್ನಾಟಕದಲ್ಲಿ ಎಷ್ಟು ಆಸ್ತಿ ಮಾಡಿದ್ದಾರೆ ಎಂಬುದನ್ನು ಹೇಳಲಿಕ್ಕೆ ಅವಕಾಶ ಕೊಡಿ.........

(ಗೊಂದಲ)

ಶ್ರೀ ಕೆ.ಎಂ. ಕೃಷ್ಣಮೂರ್ತಿ :– .....ಇವತ್ತು ಪ್ರಶ್ನೋತ್ತರ ನಡೆಸದಿದ್ದರೂ ಪರವಾಗಿಲ್ಲ. ಇದರ ಚರ್ಚೆಗೆ ಅವಕಾಶ ಮಾಡಿಕೊಡಿ. ಸರ್ಕಾರ ಈ ಬಗ್ಗೆ ಕಣ್ಣುಮುಚ್ಚಿಕೊಂಡು ಕುಳಿತಿದೆಯೇ? ಅಧಿಕಾರಿಗಳು ಏನು ಮಾಡಿದ್ದಾರೆ? ಎಂಬುದೆಲ್ಲಾ ಹೊರಗೆ ಬರಲಿ.

(ಗೊಂದಲ)

ಅಧ್ಯಕ್ಷರು :– ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಡಾ|| ಕೆ. ಅನ್ನದಾನಿ :– ಬಡವರ ಜಮೀನುಗಳನ್ನೆಲ್ಲಾ ಲೂಟಿ ಮಾಡುತ್ತಿದ್ದಾರೆ. ದಯವಿಟ್ಟು ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಅನ್ನದಾನಿಯವರೆ, ನಾನು ಚರ್ಚೆಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನೆ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) :– ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಮತ್ತು ಇತರ ಸ್ನೇಹಿತರು ನಿಲುವಳಿ ಸೂಚನೆ

ಅಡಿಯಲ್ಲಿ ಪ್ರಸ್ತಾಪಿಸಲು ತಮಗೆ ಸೂಚನೆ ಕೊಟ್ಟಿದ್ದಾರೆ. ತಾವು ನಮ್ಮ ನಿಯಮಾನುಸಾರ ಪ್ರಾಸ್ತಾವಿಕ ಮನವಿ ಸಲ್ಲಿಸುವುದಕ್ಕೆ ಅವರಿಗೆ ಅವಕಾಶ ಕೊಟ್ಟಿದ್ದೀರಿ. ಪ್ರಾಸ್ತಾವಿಕ ಮನವಿ ಸಲ್ಲಿಸುವ ವೇಳೆಗೆ ಅವರು ಬಹಳ ಗಂಭೀರ ಸ್ವರೂಪದ ಕೆಲವು ವಿಚಾರಗಳನ್ನು ಸದನದ ಗಮನಕ್ಕೆ ತಂದಿದ್ದಾರೆ. ಅದು ಈಗ ತಮ್ಮ ಮತ್ತು ಅವರ ವ್ಯಾಪ್ತಿಬಿಟ್ಟು ಇಡೀ ಸದನದ ವಸ್ತುವಾಗಿದೆ. ನಿಲುವಳಿ ಸೂಚನೆಗೆ ಅವರು ಸಹಿ ಹಾಕಿದ್ದರೂ ಕೂಡ, ಪ್ರಸ್ತಾವಿಕ ಮನವಿ ಸಲ್ಲಿಸುವ ವೇಳೆಗೆ ಅವರು ವಿಷಯಗಳನ್ನು ಬಹಿರಂಗವಾಗಿ ಸದನದಲ್ಲಿ ಹೇಳಿರುವುದರಿಂದ, Now that becomes the property of the House. House is seized of that matter. ನಾನು ತಮ್ಮಲ್ಲಿ ಇಷ್ಟೇ ವಿನಂತಿಮಾಡಿಕೊಳ್ಳುತ್ತೇನೆ. ತಮ್ಮ ಒತ್ತಡ ನನಗೆ ಗೊತ್ತಿದೆ. ಇವತ್ತು ಕಡೆಯ ದಿವಸ, ಎಲ್ಲಾ ಕೆಲಸಗಳನ್ನೂ ಮುಗಿಸಬೇಕು. ಪ್ರಸ್ತಾವಿಕ ಮನವಿ ಸಲ್ಲಿಸಿರುವುದರ ಬಗ್ಗೆ, ತಾವು ಅದನ್ನು ಬೇರೆ ರೂಲ್‌ಗೆ ನಾನು ಕನ್ವರ್ಟ್ ಮಾಡುತ್ತಿದ್ದೇನೆ ಎಂದು ಹೇಳುವುದಾದರೆ, ನಾವು ಅದಕ್ಕೆ ತಲೆ ಬಾಗುತ್ತೇವೆ.

ತಮ್ಮ ಆದೇಶವನ್ನು ನಾವು ಪ್ರಶ್ನಿಸುವುದಿಲ್ಲ. ಆಗಲೇ ಮಾನ್ಯ ಸದಸ್ಯರು ಮಾಡಿರುವಂತಹ Preliminary submission ಗೆ ಸರ್ಕಾರ ಏನು ಉತ್ತರ ಹೇಳುತ್ತದೆ, ಕೇಳೋಣ ಎಂದು ನೀವು ಅದಕ್ಕೆ ಅವಕಾಶ ಕೊಡುವುದಾದರೆ, ಸರ್ಕಾರ ಅವರು ಮಾಡಿದಂತಹ ಆ ಎಲ್ಲಾ ಆರೋಪಗಳಿಗೆ ಉತ್ತರ ಕೊಡಬೇಕಾಗುತ್ತದೆ. ಮತ್ತು ಅವರ ವಾದವನ್ನು ಇಲ್ಲಿ ಮಂಡಿಸಬೇಕಾಗುತ್ತದೆ. 'ಇದು ನಿಲುವಳಿ ಸೂಚನೆಗೆ ಲಾಯಕ್ಕಾಗಿರತಕ್ಕದ್ದಲ್ಲ, ಇದನ್ನು ತಳ್ಳಿ ಹಾಕಬೇಕು' ಎಂದು ಅವರು ತಮಗೆ ಹೇಳಬೇಕಾಗುತ್ತದೆ. ಅನಂತರವೇ ತಾವು ತಮ್ಮ ತೀರ್ಪನ್ನು ಕೊಡಬೇಕಾಗುತ್ತದೆ. ಬೇರೆ ಇತರ ಸದಸ್ಯರು ಮಾತನಾಡಲು ನಮಗೂ ಅವಕಾಶ ಕೊಡಿ ಎಂದು ಕೇಳಿದರೆ, ಆ ಬಗ್ಗೆ ಅನುಮತಿ ಕೊಡುವುದು ತಮ್ಮ ವಿವೇಚನೆಗೆ ಬಿಟ್ಟಿದ್ದು. ನಾನು ಆ ಬಗ್ಗೆ ವಕಾಲತ್ತನ್ನು ವಹಿಸುವುದಿಲ್ಲ. ಆದರೆ, ನಾನು ತಮ್ಮಲ್ಲಿ ಇಷ್ಟೇ ಮನವಿ ಮಾಡಿಕೊಳ್ಳುತ್ತೇನೆ. ಯಾವುದೇ ಸದಸ್ಯರು ಮಾತನಾಡುವ ವೇಳೆಗೆ, ಸಾರ್ವಜನಿಕ ಮಹತ್ವದ ಕೆಲವು ವಿಷಯಗಳನ್ನು ಬೆಳಕಿಗೆ ತಂದಾಗ, ಅದು ಇಡೀ ಸದನದ ವಸ್ತುವಾಗುತ್ತದೆ. ಆದ್ದರಿಂದ ಸರ್ಕಾರ ಅದಕ್ಕೆ ತನ್ನ ಪ್ರತಿಕ್ರಿಯೆಯನ್ನು ತೋರಿಸದೇ, ನಾನು ಆಮೇಲೆ ಅದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ ಎಂದು ತಾವು ಹೇಳಿದರೆ, ಅದು ಅಷ್ಟು ಸರಿಯಾಗುವುದಿಲ್ಲವೇನೋ. ಆದ್ದರಿಂದ ಸರ್ಕಾರ ತನ್ನ ಪ್ರತಿಕ್ರಿಯೆ ತೋರಿಸಬೇಕಾಗುತ್ತದೆ. ಆಮೇಲೆ ತಾವು ತಮ್ಮ ನಿರ್ಣಯವನ್ನು

ತೆಗೆದುಕೊಳ್ಳಬಹುದಾಗಿದೆ. Because, the matter is of very serious magnitude. ಮಾನ್ಯ ಪ್ರಕಾಶ್‌ರವರೆ, ನಗಬೇಡಿ. ನಿಮ್ಮ ಕಷ್ಟ ನನಗೆ ಅರ್ಥವಾಗುತ್ತದೆ. ಇದಕ್ಕೆ ಯಾರು ಏನು ಮಾಡಲಿಕ್ಕಾಗುತ್ತದೆ? ಯಾರ್ಯಾರು ಎಷ್ಟೆಷ್ಟು ಕೇಳಿಕೊಂಡು ಬಂದಿರುತ್ತಾರೋ, ಅಷ್ಟಿಷ್ಟು ಸಿಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ಎಲ್ಲರೂ ನಿಮ್ಮ ಕಷ್ಟದ ಬಗ್ಗೆ ಮಾತನಾಡುತ್ತಾರೆ. ಆದರೆ ಯಾರೂ ಕೂಡ ನಿಮ್ಮ ರಕ್ಷಣೆಗೆ ಬರುವುದಿಲ್ಲ. ' ನಿಮ್ಮ ಕಷ್ಟ ಅರ್ಥವಾಗುತ್ತದೆ, ನಿಮ್ಮ ಮೇಲೆ ಕರುಣೆ ಇದೆ" ಕೇವಲ ಇಂತಹ ಮಾತುಗಳನ್ನೇ ಆಡುತ್ತಿರುತ್ತಾರೆ. ನಾನು ನಿಮ್ಮ ಪರವಾಗಿದ್ದೇನೆ, ನೀವೇನು ಹೆದರಬೇಕಾಗಿಲ್ಲ, ಧೈರ್ಯವಾಗಿರಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ :- ಮಾನ್ಯ ಸದಸ್ಯರು ಮಾತನಾಡುತ್ತಾ, food habits ಬಗ್ಗೆ ಒಂದು ವಿಚಾರವನ್ನು ಹೇಳಿದರು. ಇಂತಿಂಥ ಪದಾರ್ಥಗಳನ್ನು ಇಲ್ಲಿ ಉಪಯೋಗಿಸುವುದಿಲ್ಲ ಎನ್ನುವಂತಹ ಖಾತ್ರಿ ಕೊಡುತ್ತೇವೆ' ಎಂದು ಹೇಳಿದ್ದಾರೆಂದು ಇಲ್ಲಿ ಪ್ರಸ್ತಾಪವಾಯಿತು. ನಮ್ಮ ರಾಜ್ಯದಲ್ಲಿ, ನಮ್ಮ ಹವಾಗುಣ, ನಮ್ಮ ಭೂಮಿಯ ಲಕ್ಷಣ, ನಮ್ಮ ಬೆಳೆಗಳು, ಅದರ ಮೇಲೆ ಆಧಾರಗೊಂಡಿರತಕ್ಕಂಥ ಆಹಾರದ ಅಭ್ಯಾಸ, ಈ ಸಮಾಜದಲ್ಲಿ ಇರತಕ್ಕಂಥ ಸಾಮಾಜಿಕ ರಚನೆ, social composition of the society, ಯಾವ್ಯಾವ ವರ್ಗದ ಜನ ಯಾವ್ಯಾವ ರೀತಿಯ ಪದಾರ್ಥ ಉಪಯೋಗಿಸುತ್ತಾರೆ, ಎಲ್ಲವನ್ನೂ ಕೂಡ ಅವರು ಸದನದ ಗೌರವದ ದೃಷ್ಟಿಯಿಂದ ಬಹಳ ಜಾಗ್ರತೆ ವಹಿಸಿ ಮಾತನಾಡಿದರೂ ಕೂಡ, ಮೂಲಭೂತ ವಿಷಯಗಳ ಕಡೆಗೆ ಅವರು ಕೈ ಹಾಕಿದ್ದಾರೆ. ಇದು ಎಲ್ಲೋ ಒಂದು ಕಡೆಗೆ ಯಾವುದನ್ನು ಸಂವಿಧಾನ ನಿರ್ಬಂಧಿಸುತ್ತದೋ, ಯಾವುದನ್ನು ಸಂವಿಧಾನಬದ್ಧವಾಗಿ ನಾವೆಲ್ಲರೂ ಕೂಡ ಖಂಡಿಸುತ್ತೇವೋ, ಅಂಥದ್ದನ್ನು ಪರೋಕ್ಷವಾಗಿ ಸರ್ಕಾರದ ನೆರವಿನಿಂದಲೇ ಮುಂದುವರೆಸಿಕೊಂಡು ಹೋಗತಕ್ಕಂಥ ಒಂದು ಸ್ಥಿತಿ ಎಂದು ಅವರು ಹೇಳಿದಾಗ, ಸರ್ಕಾರ ನಿಮ್ಮೊಬ್ಬರದೇ ಆಗುವುದಿಲ್ಲ, ನಮ್ಮೆಲ್ಲರದೂ ಆಗುತ್ತದೆ, Government is creation of this House, ನಾವೆಲ್ಲರೂ ಕೂಡ ಎಲ್ಲೋ ಒಂದು ಕಡೆಗೆ ನೋವು ಅನುಭವಿಸಬೇಕಾಗುತ್ತದೆ. This society cannot travel backwards. ಆದ್ದರಿಂದ, this is a very serious allegation that he has made. Government ಇದಕ್ಕೆ ಪ್ರತಿಕ್ರಿಯೆ ತೋರಿಸಬೇಕಾಗುತ್ತದೆ. You will have to give an opportunity to the Government. ಆಮೇಲೆ, let us see, how we should proceed.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾವು ಎರಡೆರಡು ನಿಮಿಷ ಮಾತನಾಡುತ್ತೇವೆ. ಸರ್ಕಾರ ಅದಕ್ಕೆ ಏನು ಪ್ರತಿಕ್ರಿಯೆ ಕೊಡುತ್ತದೋ ನೋಡೋಣ. ಇದನ್ನು ಅಲೋ ಮಾಡುತ್ತೀರೋ, ಇಲ್ಲವೋ? ಎಂಬ ಬಗ್ಗೆ ನೀವು ಆಮೇಲೆ ತೀರ್ಮಾನ ಮಾಡಿ.

(ಗೊಂದಲ)

ಅಧ್ಯಕ್ಷರು :- ಇಲ್ಲಿ ಸಮಯದ ಅಭಾವದ ಪ್ರಶ್ನೆ ಅಡಗಿದೆ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಶ್ರೀರಾಮರೆಡ್ಡಿಯವರೆ, ತಾವು preliminary submission ಮೇಲೆ ಮಾತನಾಡುತ್ತಿದ್ದೀರಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಹೌದು.

ಶ್ರೀ ಎಂ.ಪಿ. ಪ್ರಕಾಶ್ :- ಅದಕ್ಕೆ ಅವಕಾಶ ಕೊಡುವುದು, ಬಿಡುವುದು ಮಾನ್ಯ ಅಧ್ಯಕ್ಷರಿಗೆ ಬಿಟ್ಟಿದ್ದು.

ಅಧ್ಯಕ್ಷರು :- ಇದಕ್ಕೆ 3-4 ಜನ ಸಹಿ ಹಾಕಿದ್ದೀರಿ. ಎಲ್ಲರೂ ನಮಗೆ ಮಾತನಾಡಲು ಅವಕಾಶ ಕೊಡಿ ಎಂದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೆ, ತಾವು ನಮಗೆ ಮಾತನಾಡಲು ಅವಕಾಶ ಕೊಟ್ಟಿದ್ದರೆ, ಇಷ್ಟೊತ್ತಿಗೆ ನಾವು ಮುಗಿಸಿಯೇ ಬಿಡುತ್ತಿದ್ದೆವು.

ಅಧ್ಯಕ್ಷರು :- ನಾನು ಹೇಳುವುದನ್ನು ಕೇಳಿ ಸ್ವಾಮಿ. ಈಗ ಏನಾಗಿದೆ ಎಂದರೆ......

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ತಾವು ಆ ರೀತಿ ಮಾತನಾಡಿದರೆ ಹೇಗೆ? ನಮಗೆ ಅವಕಾಶ ಕೊಟ್ಟಿದ್ದರೆ, ನಾವು ಮುಗಿಸಿಯೇ ಬಿಡುತ್ತಿದ್ದೆವು.

ಅಧ್ಯಕ್ಷರು :- ನಾನು ಹೇಳುವುದನ್ನು ಕೇಳಿ. ಏನಾಗಿದೆ......

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನೀವು ಈ ರೀತಿ ದಬಾವಣೆ ಮಾಡುವುದಾದರೆ, ನಾವು ಮಾತೇ ಆಡುವುದಿಲ್ಲ.

(ಗೊಂದಲ)

ಅಧ್ಯಕ್ಷರು :- ಇವತ್ತು ಎಷ್ಟು business ಇದೆ ಎಂಬುದನ್ನು ನೋಡಿದ್ದೀರಾ...?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಅದಕ್ಕೆ ನಾವು ಜವಾಬ್ದಾರರಲ್ಲ. ಅದರ ಜವಾಬ್ದಾರಿ ಸರ್ಕಾರದ್ದು. ಬಿಲ್‌ಗಳನ್ನೆಲ್ಲಾ ಮೊದಲೇ ಅವರು ಮುಗಿಸಬೇಕಾಗಿತ್ತು. ಅದಕ್ಕೆ ನಾವೇನು ಬೇಡ ಎಂದು ಹೇಳಿದ್ದೇವೇ? ಅದಕ್ಕಾಗಿ ಅವರಿಗೆ ಎರಡು ದಿವಸ ಅವಕಾಶ ಕೊಡಲಿಲ್ಲವೇ?

ಅಧ್ಯಕ್ಷರು :- ಆ ಪ್ರಶ್ನೆ ಬೇರೆ......

(ಗೊಂದಲ)

ನಾನು ನಂತರ ನಿಮಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ ಎಂದರೂ ತಾವು ಈ ರೀತಿ ಮಾಡಿದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಕೇವಲ ಬಿಲ್‌ಗಳನ್ನು ಪಾಸ್ ಮಾಡಲಿಕ್ಕೆ ಮಾತ್ರ ನಾವು ಸದನಕ್ಕೆ ಬರುತ್ತೇವೆಯೇ?

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ :- ಕಾರ್ಯಕ್ರಮಗಳ ಪಟ್ಟಿಯ ಪ್ರಕಾರ ಯಾವುದೂ ಹೋಗುವುದಿಲ್ಲ. ಮಧ್ಯಂತರದಲ್ಲಿ ಬೇರೆ ಬೇರೆ ವಿಷಯಗಳು ಬರುತ್ತವೆ. ಹೀಗಿರುವಾಗ, ವಿಧೇಯಕಗಳನ್ನು ಮಂಡಿಸುವುದು ನಿಮ್ಮ ಜವಾಬ್ದಾರಿ ಎಂದರೆ ಹೇಗೆ?

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ನೀವು ನಾವು ತಂದಿರುವ adjournment motion ಅನ್ನು ಅಲೋ ಮಾಡುತ್ತೀರೋ, ಇಲ್ಲವೋ? ಎಂಬ ಬಗ್ಗೆ ನಮಗೆ ರೂಲಿಂಗ್ ಬೇಕು.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ :- ಅದು ಬೇರೆ ವಿಷಯ. ಈಗ ಸನ್ಮಾನ್ಯ ಅಧ್ಯಕ್ಷರೆ,......

(ಗೊಂದಲ)

ಅಧ್ಯಕ್ಷರು :- ಈಗ ಇವರನ್ನು ಕೇಳಿದ ಮೇಲೆ ನಾನು ಅಲೋ ಮಾಡುತ್ತೇನೋ, ಇಲ್ಲವೋ ಎಂಬುದನ್ನು ಹೇಳುತ್ತೇನೆ. ಆದರೆ ಎಲ್ಲರಿಗೂ ಮಾತನಾಡಲು ಅವಕಾಶ ಕೊಡಬೇಕೆಂದರೆ ಕಷ್ಟವಾಗುತ್ತದೆ. I can fix up a time.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ವಿಷಯ ತುಂಬಾ urgent ಇದೆ. ಅವರು 6–7 ಸಾವಿರ ಜನ ಬಂದಿದ್ದಾರೆ.

ಅಧ್ಯಕ್ಷರು :- ಆಯಿತು ಸ್ವಾಮಿ

ಶ್ರೀ ಜೆ.ಸಿ. ಮಾಧುಸ್ವಾಮಿ :- ಎರಡೆರಡು ನಿಮಿಷ brief ಆಗಿ ಮಾತನಾಡುವುದಕ್ಕೆ ಅವಕಾಶ ಕೊಡಿ ಸಾರ್.

ಅಧ್ಯಕ್ಷರು :- ಆಯಿತು, ಎರಡು ನಿಮಿಷಗಳಲ್ಲಿ ಮುಗಿಸಬೇಕು. ಎರಡು ನಿಮಿಷವಾದ ನಂತರ ನಾನು ಬೆಲ್ ಹೊಡೆಯುತ್ತೇನೆ.

(ಗೊಂದಲ)

ಶ್ರೀ ಹೆಚ್. ಆಂಜನೇಯ :- ಮಾನ್ಯ ಅಧ್ಯಕ್ಷರೆ, ಮೊನ್ನೆ ನಾನು ವಿಷಯವೊಂದನ್ನು ಪ್ರಸ್ತಾಪಿಸಲು ತಮ್ಮ ಅನುಮತಿ ಕೇಳಿದ್ದೆ. ತಾವು ಅನುಮತಿ ಕೊಟ್ಟರೆ ನಾವು ಎರಡು ನಿಮಿಷ ಮಾತನಾಡಿಬಿಡುತ್ತೇವೆ.

(ಗೊಂದಲ)

ಅಧ್ಯಕ್ಷರು :- ಆಯಿತು, ತಮಗೂ ಅವಕಾಶ ಕೊಡೋಣ. Adjournment motion ಮೇಲೆ ಮಾತನಾಡಲಿಕ್ಕೆ ಅವರಿಗೆ ಅವಕಾಶ ಕೊಟ್ಟಿದ್ದೇನೆ. ದಯಮಾಡಿ ನೀವು ಕುಳಿತುಕೊಳ್ಳಿ. ಮಾನ್ಯ ಶ್ರೀರಾಮರೆಡ್ಡಿಯವರೆ, ತಾವು ಮಾತನಾಡಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :- ಮಾನ್ಯ ಅಧ್ಯಕ್ಷರೆ, Preliminary submission ನಲ್ಲಿ ಹೆಚ್ಚಿಗೆ details ಹೇಳುವುದಕ್ಕೆ ಹೋಗುವುದಿಲ್ಲ. ನಾನು ಹೇಳತಕ್ಕಂಥದ್ದು ಇಷ್ಟೇ. ಇವತ್ತು ಎಲ್ಲಿ ಎರಡು ಮುಖ್ಯವಾದಂತಹ ಪ್ರಶ್ನೆಗಳಿವೆ. ಅವರು ನಮ್ಮ ದೇಶದ ಪ್ರತಿಷ್ಠೆಯನ್ನು ಹರಾಜು ಹಾಕುತ್ತಿರತಕ್ಕಂಥ

ಜನರಾಗಿದ್ದಾರೆ. ಅವರೆಲ್ಲಾ ಇವತ್ತು ಸನ್ಯಾಸಿಗಳ ರೂಪದಲ್ಲಿದ್ದಾರೆ. ಅವರು ಇವತ್ತು ದೇವರ ಸ್ವರೂಪದಲ್ಲಿ ಕೆಲಸ ಮಾಡುತ್ತಿದ್ದಾರೆ. ಕಾವಿ ಬಟ್ಟೆ ಹಾಕಿಕೊಂಡು, 'ಹರೇ ರಾಮ, ಹರೇ ಕೃಷ್ಣ' ಎಂದು ಹೇಳಿಕೊಂಡು ಓಲಾಡುತ್ತಿರತಕ್ಕಂಥ ಜನ, ನಮ್ಮ ದೇಶದ ಘನತೆ, ಗೌರವ, ಪ್ರತಿಷ್ಠೆಯನ್ನು ವಿದೇಶಿಗಳ ಮುಂದೆ ಹರಾಜು ಹಾಕುತ್ತಿದ್ದಾರೆ. ಏಕೆಂದರೆ, ಅವರು ಲೂಟಿ ಹೊಡೆಯಲಿಕ್ಕೆ. ಇದು ಮುಖ್ಯವಾದಂತಹ ಒಂದು ಪ್ರಶ್ನೆಯಾಗಿದೆ. ಎರಡನೇ ಪ್ರಶ್ನೆ ಏನೆಂದರೆ, ಇಡೀ ನಮ್ಮ ದೇಶದ........

ಶ್ರೀ ಆರ್. ಅಶೋಕ್ :- ಸಾರ್, ಒಂದು ನಿಮಿಷ. ಮಾನ್ಯ ಅಧ್ಯಕ್ಷರೆ, ಅವರು 'ಕಾವಿ ಬಟ್ಟೆ, ಆ ಬಟ್ಟೆ, ಎಂದು ಹೇಳಬಾರದು. ದಯವಿಟ್ಟು ಆ ತರಹದ ಪದ ಉಪಯೋಗ ಮಾಡುವುದು ತಮಗೆ ಗೌರವ ತರತಕ್ಕಂಥ ಮಾತಲ್ಲ. 'ಕಾವಿ ಬಟ್ಟೆ' ಎಂದೇಕೆ ತಾವು ಹೇಳುತ್ತೀರಿ? ಬೇರೆ ಯಾವ ತರಹದ ಬಟ್ಟೆ ಹಾಕಿಕೊಂಡು ವಸೂಲಿ ಮಾಡುವುದಿಲ್ಲವೇ?........

ಅಧ್ಯಕ್ಷರು :- ಮಾನ್ಯ ಅಶೋಕ್‌ರವರೆ, ಅವರು ಮಾತನಾಡಲಿ. ಈಗಾಗಲೇ ಸಮಯವಾಗಿದೆ.

(ಗೊಂದಲ)

ಶ್ರೀ ಆರ್. ಅಶೋಕ್ :- ಆ ಬಟ್ಟೆ ಎಂದು ಏಕೆ ನೀವು ಹೇಳುತ್ತೀರಿ? ಯಾವುದೋ ಒಂದು ಧರ್ಮದ ಮೇಲೆ ಮಾತನಾಡಬೇಡಿ........

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾವು ಧರ್ಮದ ಮೇಲೆ ಮಾತನಾಡುತ್ತಿಲ್ಲ...

(ಗೊಂದಲ)

ಅಧ್ಯಕ್ಷರು :- ಮಾನ್ಯ ಅಶೋಕ್‌ರವರೆ, ಅವರು ಮಾತನಾಡಲಿ. ಸಮಯವಿಲ್ಲ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾನು ಆ ಪದವನ್ನೇ ಬಳಸುತ್ತೇನೆ. ಆ ಪದ un parliamentary ಪದ ಆಗುವುದಾದರೆ, ಮಾನ್ಯ ಅಧ್ಯಕ್ಷರು ಅದನ್ನು ಕಡತದಿಂದ ತೆಗೆಯಲಿ.

(ಗೊಂದಲ)

ಶ್ರೀ ಆರ್. ಅಶೋಕ್ :- ಕೇಸರಿ ಎನ್ನುವ ಪದವನ್ನು ಏತಕ್ಕೆ ಉಪಯೋಗಿಸುತ್ತೀರಿ, ನಾವು ಬಳಸುತ್ತೇವೆ, ನೀವೇನು ಮಾಡುತ್ತಿದ್ದಿರೆನ್ನುವುದನ್ನು ಹೇಳಬೇಕಾಗುತ್ತದೆ, ಈ ದೇಶದ ಪಾರ್ಟಿನೆ ಅಲ್ಲವೆಂದು ಹೇಳುತ್ತೇವೆ, ದಯವಿಟ್ಟು ನೀವು ಯಾರಿಗೂ ನೋವಾಗದಂತೆ ಮಾತನಾಡಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಅದು ಜನರಿಗೆ ಗೊತ್ತಿದೆ ಬಿಡ್ರಿ, ಅಧ್ಯಕ್ಷರೆ, ನಾನು ನಿಮ್ಮ ಹತ್ತಿರ ಮಾತನಾಡುತ್ತಿರುವುದು, ನಾನು ಹೇಳಿರತಕ್ಕಂತಹದ್ದು ಅನ್-ಪಾರ್ಲಿಮೆಂಟರಿಯಾದರೆ, ನೀವು ಕಡತದಿಂದ ತೆಗೆಯಿರಿ (ಗೊಂದಲ)

ಡಾ॥ ಹೆಚ್.ಸಿ. ಮಹಾದೇವಪ್ಪ :- ಸರ್, ಕಾಕಿ, ಕಾದಿ, ಕಾವಿ ಎಂದು ಹೇಳುವುದರಲ್ಲಿ ಅನ್-ಪಾರ್ಲಿಮೆಂಟರಿ ಹೇಗಾಗುತ್ತದೆ, ತಪ್ಪೇನಿದೆ? It is not unparliamentary.

ಅಧ್ಯಕ್ಷರು :- ನೋಡಿ, ಸ್ವಲ್ಪ ಎಚ್ಚರದಿಂದ ಮಾತನಾಡಿ, ಧರ್ಮ, ಇತ್ಯಾದಿಗಳನ್ನು ಸೇರಿಸುವುದು ಬೇಡ (ಗೊಂದಲ)

ಡಾ॥ ಹೆಚ್.ಸಿ. ಮಹಾದೇವಪ್ಪ :- ಗುಜರಾತ್ ಸರ್ಕಾರದ ಬಗ್ಗೆ ನಾವೆಲ್ಲರು ಬೇರೆ ಜನತಾ ಪಾರ್ಟಿಯಲ್ಲಿದ್ದಾಗ, ಸಫ್ರನ್ಯೈಜೇಷನ್ ಬಗ್ಗೆ ಭಾರಿ ಮಾತನಾಡಿದ್ದೇವೆ, ತಾವು (ಎಂ.ಪಿ.ಪ್ರಕಾಶ್) ಮಾತನಾಡಿದ್ದೀರಿ, ನಾವೆಲ್ಲ ಮಾತನಾಡಿದ್ದೇವೆ, ತಪ್ಪೇನಿದೆ ಹೇಳಿ, ಕಾಕಿ, ಕಾವಿ, ಕಾದಿ ಎಂದು ಹೇಳಿದರೆ ತಪ್ಪೇನಿದೆ? it unparliamentary?..........

(ಗೊಂದಲ)

ಅಧ್ಯಕ್ಷರು :- ಎಲ್ಲರು ಕುಳಿತುಕೊಳ್ಳಿ, ಸ್ವಲ್ಪ ಎಚ್ಚರವಾಗಿ ಮಾತನಾಡಿ

(ಗೊಂದಲ)

ಶ್ರೀ ಆರ್. ಅಶೋಕ್ :- ರೆಡ್ ಬಟ್ಟೆನೂ ಹಾಕಿಕೊಂಡು ಹೋಗುತ್ತಾರೆ, ಕೇಸರಿ ಬಟ್ಟೆನೂ ಹಾಕಿಕೊಂಡು ಹೋಗುತ್ತಾರೆ, ಎಲ್ಲಾನೂ ಹಾಕಿಕೊಂಡು ಹೋಗುತ್ತಾರೆ (ಗೊಂದಲ).

ಶ್ರೀ ವೆಂಕಟೇಶ್ :- ಬಟ್ಟೆಯನ್ನು ಎಲ್ಲರೂ ಹಾಕಿಕೊಳ್ಳುವುದಕ್ಕಾಗುತ್ತದೆಯೇ, ಹಾಗಾದರೆ ನೀವು (ಶ್ರೀರಾಮರೆಡ್ಡಿ) ಕಾವಿಬಟ್ಟೆಯನ್ನು ಹಾಕಿಕೊಳ್ಳಿ ನೋಡೋಣ (ಗೊಂದಲ)

ಅಧ್ಯಕ್ಷರು :- ಎಲ್ಲರೂ ಹೀಗೆ ನಿಂತುಕೊಂಡರೆ ಹೇಗೆ, ಈಗ ಸಮಯವಿಲ್ಲವೆಂದು ನಾನು ಅವರಿಗೆ (ಶ್ರೀರಾಮರೆಡ್ಡಿ) ಮಾತನಾಡಲು ಕೊಡುತ್ತಿರಲಿಲ್ಲ, ಅವರೇನೊ ಕೇಳಿದರೆಂದು ಎರಡು ನಿಮಿಷ ಮಾತನಾಡಿ ಎಂದರೆ ಈ ರೀತಿ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಎನ್. ಧರ್ಮಸಿಂಗ್ :- ಅಧ್ಯಕ್ಷರೆ, ಶ್ರೀರಾಮರೆಡ್ಡಿಯವರು ಎಡಪಕ್ಷದವರು, ಹೋರಾಟ ಮಾಡಿ ಸಂಘರ್ಷ ಮಾಡಿ, ಈ ದೇಶದಲ್ಲಿರುವ ವ್ಯವಸ್ಥೆ ಏನಿದೆ, ಯಾವ ರೀತಿಯಾಗಿ ಶೋಷಣೆಯಾಗುತ್ತಿದೆ ಆ ಹಿನ್ನೆಲೆಯಲ್ಲಿ ಅದನ್ನೂ ಸರಿಯಾದ ರೀತಿಯಲ್ಲಿ ಇವತ್ತು ಪ್ರಸ್ತಾಪ ಮಾಡುತ್ತಿದ್ದಾರೆ. ಮಾನ್ಯ ಶ್ರೀರಾಮರೆಡ್ಡಿಯವರು ಬಹಳ ಹಿರಿಯ ಸದಸ್ಯರಾಗಿ ಮಾತನಾಡುತ್ತಿದ್ದಾರೆ, ಅವಕಾಶ ಕಲ್ಪಿಸಿಕೊಡಿ. ಮಧ್ಯದಲ್ಲಿ ಅಶೋಕ್‌ರವರು ಹೇಳಿದರೆ, ನಮ್ಮ ಮೇಲೆನು ಪ್ರಭಾವ ಬೀರುತ್ತದೆಯೇ? ಅದು ಹೇಗೆ ಹೇಗಾಯಿತು ಎಂಬ ಕಪಟ ನಾಟಕ ಏಕೆ? ಈ ದೇಶದಲ್ಲಿ ಯಾವ ರೀತಿಯಾಗಿ ನಡೆಯುತ್ತಿದೆ, ಸಮಾಜದಲ್ಲಿ ಮಾಡುವ ಘಾತಕ ಶಕ್ತಿಗಳ ಬಗ್ಗೆ ಶ್ರೀರಾಮರೆಡ್ಡಿಯವರು ಹೇಳುತ್ತಿದ್ದಾರೆ– He has every right to express his views. ಆದರಲ್ಲಿ ಯಾರೂ ಕೂಡ ಅಡ್ಡಿ ಆತಂಕ ಮಾಡಬಾರದು, ಪ್ರಕಾಶ್‌ರವರು ತಾವು ಸರಿಯಾಗಿ ಹೇಳಿದ್ದೀರಿ.

ಶ್ರೀ ಹೆಚ್.ಡಿ. ಬಸವರಾಜು :- ಆದರೆ ಕಾವಿಯನ್ನು ಧರಿಸುವವರಲ್ಲಿ ಬಹಳಷ್ಟು ಜನ ಉತ್ತಮರಿದ್ದಾರೆ, ನಾವೇನಾದರೂ ಅದರ ಬಗ್ಗೆ ವ್ಯಾಖ್ಯಾನ ಮಾಡಿದರೆ ಅವರಿಗೆ ಅಪಚಾರ ಮಾಡಿದಂತಾಗುತ್ತದೆ. ಹಾಗಾಗಿ ನಿರ್ದಿಷ್ಟವಾಗಿ ಅಂತಹವರ ಮೇಲೆ ಹೇಳುವುದಿದ್ದರೆ ಹೇಳಿ, ಬೇಡವೆನ್ನುವುದಿಲ್ಲ (ಗೊಂದಲ)

ಶ್ರೀ ಆರ್. ಅಶೋಕ್ :- ಎಲ್ಲವು ಎಲ್ಲರಿಗೂ ಗೊತ್ತಿದೆ, ವಿದೇಶದಿಂದ ಭಯೋತ್ಪಾದಕರ ಹಣ ಬರುತ್ತಿದೆಯಲ್ಲಾ, ಯಾರ್‍ಯಾರದೋ ಬರುತ್ತಿದೆ, ಹೇಗೆ ಹೇಗೆ ಬರುತ್ತಿದೆ ಎಂಬುದನ್ನು ನಾವು ಕೂಡ ಪತ್ರಿಕೆಯಲ್ಲಿ ನೋಡಿದ್ದೇವೆ, ಮಾತನಾಡುವುದಿದ್ದರೆ ಯಾರಿಗೂ ನೋವಾಗದ ರೀತಿಯಲ್ಲಿ ಮಾತನಾಡಿ, ಇಸ್ಕಾನ್‌ರವರು ತಪ್ಪು ಮಾಡಿದ್ದರೆ ಇಸ್ಕಾನ್ ವಿಚಾರವಾಗಿ ಮಾತನಾಡಿ (ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು :- ಅಷ್ಟಕ್ಕೆ ಸೀಮಿತವಾಗಿ ಮಾತನಾಡಿ ಬೇಡವೆನ್ನುವುದಿಲ್ಲ, ಸೀಮಿತವಾಗಿ ಅವರ ಹೆಸರನ್ನು ಹಿಡಿದೆ ಹೇಳಿ (ಗೊಂದಲ)

ಅಧ್ಯಕ್ಷರು :- ಒಂದೆರಡು ನಿಮಿಷ ಎಚ್ಚರಿಕೆಯಿಂದ ಮಾತನಾಡಿ, ಎಲ್ಲರೂ ಕುಳಿತುಕೊಳ್ಳಿ, ಈ ಧರ್ಮ, ಬಾವುಟ ಗಿವುಟ, ಬಟ್ಟೆಗಿಟ್ಟೆ ಎಲ್ಲಾ ಮಾತನಾಡಬೇಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾನು ಭಾರಿ ಸ್ಪಷ್ಟವಾಗಿ ಹೇಳಿದ್ದೇನೆ- it only applies to ISKCON. ಇಸ್ಕಾನ್‌ರವರ ಬಗ್ಗೆ ಮಾತನಾಡುವಾಗ ಮಾತ್ರ ನಾನು ಹೇಳಿರುವುದು. ಇಸ್ಕಾನ್, ಕರ್ನಾಟಕದವರ ಬಗ್ಗೆ ಹೇಳುವಾಗ ಮಾತ್ರ ನಾನು ಹೇಳಿರತಕ್ಕಂತಹದ್ದು, ಬೇರೆಯವರಿಗೆ ಸಂಬಂಧಪಟ್ಟಿದ್ದಲ್ಲ. ನಾನು ಸ್ಪಷ್ಟವಾಗಿ ಹೇಳುತ್ತೇನೆ, ಈಗಲೂ ಹೇಳುತ್ತೇನೆ.

ಅಧ್ಯಕ್ಷರು :- ಇಸ್ಕಾನ್‌ನಲ್ಲಿ ವೈಟ್ ಬಟ್ಟೆ ಹಾಕಿಕೊಳ್ಳುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಸರ್, ಅವರು ಎರಡೂ ಹಾಕುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಇಸ್ಕಾನ್‌ನಲ್ಲಿ ಮದುವೆಯಾಗಿರುವವರು ವೈಟ್ ಬಟ್ಟೆ ಹಾಕುತ್ತಾರೆ, ಮದುವೆಯಾಗದಿರುವವರು ಕೇಸರಿ ಬಟ್ಟೆ ಹಾಕುತ್ತಾರೆ (ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ :- ಈಗೇನು ಪ್ರಭುದಾಸರಿದ್ದಾರೆ ಅವರು ಕೂಡ ಹಾಕುವುದಿಲ್ಲ, ಬೇರೆ ವ್ರತ ತೆಗೆದುಕೊಂಡವರು ಬೇರೆ ಇದ್ದಾರೆ, ಅವರು ಬೇರೆ ಸಮಯದಲ್ಲಿ ಮಾಡುತ್ತಾರೆ.

ಅಧ್ಯಕ್ಷರು :- ಈಗ activities ಬಗ್ಗೆ ಮಾತನಾಡಿ.

ಶ್ರೀ ಎಸ್. ರಾಜೇಂದ್ರನ್ :- ಕಾವಿ ಬಟ್ಟೆ ಬಗ್ಗೆ ಮಾತನಾಡಿ, ಓಂಶಕ್ತಿಗೆ ಹೋಗುವವರು ಕಾವಿ ಬಟ್ಟೆ ಹಾಕಿಕೊಂಡು ಹೋಗುತ್ತಾರೆ, ಏನು, ಕಾವಿ ಬಟ್ಟೆಯನ್ನು ಯಾರು ಹಾಕುವುದಿಲ್ಲವೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಸರ್, ನಾನು ಪ್ರತ್ಯೇಕವಾಗಿ ಇಸ್ಕಾನ್ ಬಗ್ಗೆ ಮಾತನಾಡುವಾಗ ಮಾತ್ರ ಹೇಳುತ್ತಿದ್ದೇನೆ. General ಆಗಿ ರೆಫರ್ ಮಾಡುತ್ತಿಲ್ಲ. ನಾನು ಈಗಲೂ ಹೇಳುತ್ತೇನೆ, ಅದರಲ್ಲಿರುವವರು ಕಾವಿ ಬಟ್ಟೆ ಹಾಕುತ್ತಾರೆ. ನಾನೆ ಏತಕ್ಕೆ ಇಸ್ಕಾನ್ ಎಂದು ಹೇಳಿದೆ ಎಂದರೆ, ನಮ್ಮ ದೇಶದ ಗೌರವ ಪ್ರತಿಷ್ಠೆಯನ್ನು ವಿದೇಶಗಳ ಮುಂದೆ ಹರಾಜ್ ಹಾಕತಕ್ಕಂತಹವರ ಸ್ವರೂಪ ಹೀಗಿದೆ ಎಂದು

ಹೇಳುತ್ತಿದ್ದೇನೆಯೇ ಹೊರತು ಬೇರೆಯವರ ಬಗ್ಗೆ ಹೇಳುತ್ತಿಲ್ಲ. ಎರಡನೆಯದು, ಇಡೀ ಅಕ್ಷರ ದಾಸೋಹದ ಹೆಸರಿನಲ್ಲಿ ಇವತ್ತು ಲೂಟಿ ಹೊಡೆಯುತ್ತಿದ್ದಾರೆ. ಅಕ್ಷರ ದಾಸೋಹಕ್ಕೆ ಹಣ ಕೊಡುತ್ತಿರುವುದು ನಮ್ಮ ರಾಜ್ಯ ಸರ್ಕಾರ. ನಮ್ಮ ರಾಜ್ಯ ಸರ್ಕಾರ ಕೇಂದ್ರ ಸರ್ಕಾರ ಎರಡೂ ಕೊಡುತ್ತಿದೆ. ಅದನ್ನು ಕೊಡುತ್ತಿರುವ ಹಿನ್ನೆಲೆ, ನಮ್ಮ ದೇಶದ ಸಾಮಾಜಿಕ ಭದ್ರತೆ ಮತ್ತು ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸತಕ್ಕಂತಹ ಉದ್ದೇಶ ಎರಡೂ ಸರ್ಕಾರಗಳಿಗಿವೆ. ಆ ಮಾನವ ಸಂಪನ್ಮೂಲ ಪೋಲಾಗಬಾರದೆನ್ನುವ ದೃಷ್ಟಿಯಲ್ಲಿ ಎರಡೂ ಸರ್ಕಾರಗಳು ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿರತಕ್ಕಂತಹ ಸಂದರ್ಭದಲ್ಲಿ ನಮ್ಮ ಹಣವನ್ನು ಉಪಯೋಗಿಸಿ ಬೇರೆ ರೀತಿಯಲ್ಲಿ ಹಣವನ್ನು ವಸೂಲ್ಮಾಡುವ, ಹಣ ನಮ್ಮದು, ಅವರು ಬೇರೆ ಬೇರೆ ಹೆಸರಿನಲ್ಲಿ ಪ್ರಾಪರ್ಟಿ ಮಾಡುವುದಕ್ಕೆ ಲೂಟಿ ಮಾಡುತ್ತಿರುವುದು. ಇವರು ನಮ್ಮ ಹೆಸರಿನ ಒಂದೇ ಒಂದು ಅಕ್ಷರವನ್ನು ಹೇಳಲಿಲ್ಲ. ಅಂದರೆ, ನನ್ನ ಹತ್ತಿರ ಬ್ಯಾಲೆನ್ಸ್ ಶೀಟ್ ಇದೆ, ಅದಮ್ಯ ಚೇತನ ಎನ್ನುವ ಸಂಘಟನೆಯವರು3 ರೂಪಾಯಿ 60 ಪೈಸೆಗೆ ಒಂದು ಮಗುವಿಗೆ ಊಟ ಕೊಡುತ್ತಿದ್ದಾರೆ. ಅದೇ ಇಸ್ಕಾನ್‌ರವರು ಒಂದು ಮಗುವಿಗೆ 6 ರೂಪಾಯಿ ರೇಟ್ ಹಾಕುತ್ತಿದ್ದಾರೆ. ಅದಮ್ಯ ಚೇತನದವರು 3 ರೂಪಾಯಿ 60 ಪೈಸೆಯಂತೆ ಎರಡೂವರೆ ಲಕ್ಷ ಜನಕ್ಕೆ ಊಟ ಕೊಡುತ್ತಿದ್ದಾರೆ, ಇವರು (ಇಸ್ಕಾನ್) ಒಬ್ಬರಿಗೆ 6 ರೂಪಾಯಿಯಂತೆ 5 ಲಕ್ಷ ಜನರಿಗೆ ಕೊಡುತ್ತಿದ್ದಾರೆ, 5 ಲಕ್ಷ ಜನಕ್ಕೆ ಲೆಕ್ಕಾ ಹಾಕಿ, ಅದೇ 3 ರೂಪಾಯಿ 60 ಪೈಸೆಯಂತೆ ಎರಡೂವರೆ ಲಕ್ಷ ಜನಕ್ಕೆ ಇವರು ಕೊಡುತ್ತಿದ್ದಾರೆ, ನಮ್ಮ ಹತ್ತಿರ ಲೆಕ್ಕವಿದೆ, ನಾನು ಆಮೇಲೆ ಕೊಡುತ್ತೇನೆ, ವಿವರಗಳಿಗೆ ನಾನು ಹೋಗುವುದಿಲ್ಲ. ಅದರ ಜೊತೆಯಲ್ಲಿಯೇ ಇವತ್ತು ಅಕ್ಷಯ ದಾಸೋಹ ಕಾರ್ಯಕ್ರಮದಲ್ಲಿ ಎರಡು ಸಾಮಾಜಿಕವಾದಂತಹ, ಗಂಭೀರವಾದಂತಹ ತತ್ವಗಳು ಅಡಕವಾಗಿದೆ. ಒಂದು ಬಡ ಮಕ್ಕಳಿಗೆ ಊಟ ಕೊಟ್ಟು ಶಾಲೆಗೆ ಬರುವ ಹಾಗೆ ಮಾಡಿ, ಅವರ ಮಾನ ಸಂಪನ್ಮೂಲವನ್ನು ಅಭಿವೃದ್ಧಿ ಮಾಡುವ ಉದ್ದೇಶ. ಅದರ ಜೊತೆಯಲ್ಲೇ ಇವತ್ತು ಅಕ್ಷರ ದಾಸೋಹದಲ್ಲಿ ಕೆಲಸ ಮಾಡುತ್ತಿರುವ ಲಕ್ಷಾಂತರ ಆ ಬಡ ಹೆಣ್ಣು ಮಕ್ಕಳೇನಿದ್ದಾರೆ, ಅವರು ಡಿಪ್ರೈಡ್ ಕ್ಲಾಸ್‌ನವರು. ಅದರಲ್ಲಿ ವಿಧವೆಯರಿದ್ದಾರೆ, ಸಾಮಾಜಿಕವಾಗಿ ತುಳಿತಕ್ಕೊಳಗಾದವರಿದ್ದಾರೆ, ಸಾಮಾಜಿಕವಾಗಿ ಹಿಂದುಳಿದಂತಹವರಿದ್ದಾರೆ, ಅಲ್ಪಸಂಖ್ಯಾತರಿದ್ದಾರೆ. ಜೀವನಕ್ಕೆ ಯಾವುದೇ ಆಧಾರವಿಲ್ಲದಿರುವ ಹೆಣ್ಣು ಮಕ್ಕಳಿಗೆ ಜೀವನಕ್ಕೆ ಒಂದಿಷ್ಟು ಗಂಜಿಯನ್ನು

ನೋಡಿಕೊಳ್ಳುವುದಕ್ಕೆ ಅಧಾರವಾಗಿರತಕ್ಕಂತಹ ಬಹು ದೊಡ್ಡ ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮದ ಉದ್ದೇಶ ಅದರಲ್ಲಿದೆ. ಇಂತಹ ಒಳ್ಳೆಯ ಉದ್ದೇಶವಿರುವ ಕಾರ್ಯಕ್ರಮದ ಹೆಸರಿನಲ್ಲಿ ಯಾರ್‍ಯಾರೋ ಕಂಪನಿಯ ಹೆಸರಿನವರು ವಿದೇಶಗಳಲ್ಲಿ ಹೋಗಿ, ಜಾಹೀರಾತನ್ನು ನೋಡಬೇಕು, ನೀವು ಜಾಹಿರಾತನ್ನು ನೋಡಬೇಕು.

ಅಧ್ಯಕ್ಷರು :- ಅವರು ಜಾಹಿರಾತಿನ ಬಗ್ಗೆ ಹೇಳಿದ್ದಾರೆ, ಬೇರೆ ವಿಚಾರ ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಅದು ಸಾಧಾರಣವಾದ ಜಾಹಿರಾತಲ್ಲ, ಅವರು ಮಕ್ಕಳನ್ನು ತೋರಿಸತಕ್ಕಂತಹ ಜಾಹಿರಾತು. ನಾನು ಹೇಳುತ್ತಿರತಕ್ಕಂತಹ ಜಾಹಿರಾತು, ಒಂದು ಮಗುವಿಗೆ 12 ರೂಪಾಯಿಯಾಗುತ್ತದೆ, ನೀವು ಹಣ ಡೊನೇಟ್ ಮಾಡಿ ಎಂದು ವಿದೇಶಗಳಲ್ಲಿ ಏಜೆಂಟ್‌ರನ್ನು ಇಟ್ಟಿದ್ದಾರೆ, ಇದನ್ನು ನಾನು ಹೇಳುತ್ತಿರುವುದು. ಅವರ ಹೇಳುತ್ತಿರುವ ಜಾಹಿರಾತು ಮಕ್ಕಳನ್ನು ತೋರಿಸುತ್ತಿರತಕ್ಕಂತಹ ಜಾಹಿರಾತು. ಯೂರೋಪನಲ್ಲಿ ಟ್ಯಾರಿಫ್ ಅನ್ನು ವಸೂಲ್ಮಾಡಿದ್ದಾರೆ, ಅಮೇರಿಕಾದಲ್ಲಿ ಒಂದು ಟ್ಯಾರಿಫ್, ಯೂರೋಪ್ ನಲ್ಲಿ ಒಂದು ಟ್ಯಾರಿಫ್, ಏಷ್ಯಾ ದೇಶಗಳಲ್ಲಿ ಒಂದು ಟ್ಯಾರಿಫ್, ಒಂದೊಂದು ದರದಲ್ಲಿ ಒಂದೊಂದನ್ನು ನಿಗದಿ ಮಾಡಿ ಈ ಟ್ಯಾರಿಫ್ ಪ್ರಕಾರ ಹಣ ಕೊಡಬೇಕೆಂದು ಹೇಳುತ್ತಿದ್ದಾರೆ. ಸರ್ಕಾರ ಇದನ್ನು ಖಾಸಗೀಕರಣ ಮಾಡುವ ಉದ್ದೇಶದಿಂದ, ಈ ಎಲ್ಲಾ ಖಾಸಗಿಯವರಿಗೆ ಕೊಡುವ ವ್ಯವಸ್ಥೆ ಮಾಡಿರುವುದು ಇದಕ್ಕೆ ಮೂಲಭೂತವಾದ ಕಾರಣ. ಆದುದರಿಂದ ಸರ್ಕಾರ ತಕ್ಷಣ ಆ ಇಸ್ಕಾನ್‌ರವರಿಗೆ ಕೊಟ್ಟಿರುವ ಒಪ್ಪಂದವನ್ನು ರದ್ದು ಮಾಡಿ, ನಮ್ಮ ಸರ್ಕಾರವೇ ನಡೆಸಬೇಕು, ಇದನ್ನು ಯಾವುದೇ ಕಾರಣಕ್ಕೂ ಖಾಸಗೀಕರಣ ಮಾಡಬಾರದು. ಇದು ಸರ್ಕರದ ಧೋರಣೆಯಾಗಬೇಕು. ಆದ್ದರಿಂದ ನಾವು ಮಾಡುತ್ತಿರತಕ್ಕಂತಹ ಆರೋಪ ಏನಿದೆ, 2, 000 ಕೋಟಿ ರೂಪಾಯಿಗಳನ್ನು ಲೂಟಿ ಹೊಡೆಯುತ್ತಿದ್ದಾರೆ. ಇದನ್ನು ನಾವು ಸದನದಲ್ಲಿ ಗಂಭೀರವಾಗಿ ಚರ್ಚೆ ಮಾಡಬೇಕಾಗಿದೆ. ನೀವು ವ್ಯಾಪಕವಾದ ಚರ್ಚೆಗೆ ಎಲ್ಲ ಸದಸ್ಯರಿಗೂ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :- ಬೇಗ ಎರಡು ನಿಮಿಷದಲ್ಲಿ ಮುಗಿಸಿ. ತುಂಬ ಅತಿ ಆಗಿ ಬಿಟ್ಟಿತು ನಿಮ್ಮದು. ಪ್ರಾರಂಭ ಮಾಡಿದ ಮೇಲೆ ಏನು ಮಾಡುತ್ತೀರಿ ಎಂದು ನನಗೆ ಗೊತ್ತಿದೆ.

ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. :- ನಾನು ಇದನ್ನು ಪ್ರಾರಂಭ ಮಾಡಿಲ್ಲ ಅತಿಯಾಯಿತು ಎಂದರೆ ಹೇಗೆ? ಯಾರಿಗೆ ಹೇಳಬೇಕು ಅವರಿಗೆ ಹೇಳುವುದು ಬಿಟ್ಟು ನೀವು ನೇರವಾಗಿ ನನ್ನ ಮೇಲೆ ಆಪಾದನೆ ಮಾಡುತ್ತಿದ್ದೀರಿ. ನಾನು ಯಾವತ್ತೂ ಆ ತರಹ ಮಾತನಾಡಿಲ್ಲ. ಇಸ್ಕಾನ್ ಕರ್ನಾಟಕದವರು ಮಧು ಪಂಡಿತ್ ದಾಸ ಮತ್ತು ಛಲಪತಿ ದಾಸ್‌ರವರ ಬಗ್ಗೆ ಪಬ್ಲಿಕ್ ನೋಟೀಸ್ ಕೊಟ್ಟಿದ್ದಾರೆ. ಅವರಿಗೂ ನಮಗೂ ಏನೂ ಸಂಬಂಧ ಇಲ್ಲ, ಇವರು ಇಸ್ಕಾನ್ ಚಾರಿಟೀಸ್ ಇಂಡಿಯಾ ಹೆರಿಟೇಜ್ ಟ್ರಸ್ಟ್ ಎಂದು ಹೇಳಿ ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡುತ್ತಿದ್ದಾರೆ. ಅವರ ಮೇಲೆ ಪಬ್ಲಿಕ್ ನೋಟೀಸ್ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ಎಂದು ನಾನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಬೆಂಗಳೂರು ಮುನಿಸಿಪಲ್ ಕಾರ್ಪೊರೇಷನ್‌ರವರು, "The BMP will bear the costs of providing meals at secondary and pre University colleges and half of the cost of providing meals at day care centers and Primary Schools. It has allocated Rs. 200 crore in its budget for this programme." 200 ಕೋಟಿ ರೂಪಾಯಿ ಅದಕ್ಕೆ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಮಾಧುಸ್ವಾಮಿಯವರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಪುನಃ ರಿನೀವಲ್‌ಗೆ ಬಂದಿದೆ, ನಾವು ಸರ್ಕಾರವನ್ನು ಕೇಳುವಂಥದ್ದು ಅದನ್ನು ತಕ್ಷಣದಲ್ಲಿ ತಡೆಹಿಡಿಯಬೇಕು. ತನಿಖೆ ಆದ ಮೇಲೆ ಮುಂದಿನ ತೀರ್ಮಾನ ತೆಗೆದುಕೊಳ್ಳಬೇಕು. ದೆಹಲಿಯ ಮುನಿಸಿಪಲ್ ಕಾರ್ಪೊರೇಷನ್ Standing Committee ಯವರು ಕಮೀಷನರ್‌ರವರಿಗೆ ಒಂದು ಪತ್ರವನ್ನು ಬರೆಯುತ್ತಾರೆ. ಅದರಲ್ಲಿ ಅವರು ಹೇಳುತ್ತಾರೆ, ಈ ಸಂಸ್ಥೆ ಕೇವಲ ಬೆಂಗಳೂರಿನಲ್ಲಿ ಅಲ್ಲ, ದೆಹಲಿಯಲ್ಲಿ ಸಹ ಸ್ಥಳವನ್ನು ಕೇಳಿದೆ, ಅವರು ಏನೇನು ಚಟುವಟಿಕೆ ಮಾಡುತ್ತಿದ್ದಾರೆ ಅದರಿಂದ ಮುನಿಸಿಪಲ್ ಕಾರ್ಪೊರೇಷನ್ ನಷ್ಟವಾಗುತ್ತಿದೆ. ಅದನ್ನು ತಡೆಹಿಡಿಯಬೇಕು. ಅರ್ಜೆಂಟಾಗಿ ನಮಗೆ ಉತ್ತರ ಬರೆಯಿರಿ ಎಂದು ಕಮಿಷನರ್‌ಗೆ ಪತ್ರ ಬರೆಯುತ್ತಾರೆ. ಇವೆಲ್ಲಾ ಗೊತ್ತಿದ್ದೂ ನಮ್ಮ ಸರ್ಕಾರ ಮಹಾ ನಗರ ಪಾಲಿಕೆಯವರು ಇದನ್ನು ಮುಂದುವರೆಸುವುದಕ್ಕೆ ಕೊಡುವ ಪರಿಸ್ಥಿತಿ ಆದರೆ ಬಟ್ಟೆ ಕಲರ್ ಅಲ್ಲ, ಆ ವ್ಯಕ್ತಿಯು ಬಣ್ಣ ಏನೆಂದು ತೀರ್ಮಾನವಾಗಬೇಕು. ನಾವು ಹಾಕಿದ ಬಟ್ಟೆಯ ಬಣ್ಣ ಮುಖ್ಯವಲ್ಲ. ಆ ವ್ಯಕ್ತಿ ಯಾವ ಬಣ್ಣದಲ್ಲಿ ಬಂದು ಇವೆಲ್ಲಾ ಮಾಡುತ್ತಿದ್ದಾರೆ, ಅದರ ಬಗ್ಗೆ ತನಿಖೆ ಆಗಬೇಕು.

ಇನ್ನೊಂದು ಗಹನವಾದ ವಿಷಯವೆಂದರೆ, ಕನಕಪುರ ರೋಡ್‌ನಲ್ಲಿ real estate business ಏನು ಮಾಡುತ್ತಿದ್ದಾರೆ. ಹೆಗಡೆ ಅಂಡ್ ಗೋಲೆ ಅವರಿಗೆ ಕೊಟ್ಟ ಪ್ರಾಪರ್ಟಿ ಏನಿದೆ, ಅದನ್ನು ಹೊರಗೆ ಹಾಕಿದ್ದಾರೆ. ಅದರ ಬಗ್ಗೆ ತನಿಖೆ ಆಗಲಿ ಕೆ.ಐ.ಎ.ಡಿ.ಬಿ ಯವರ ಹತ್ತಿರ ಒಂದು ಭಾಗವನ್ನು ತೆಗೆದುಕೊಂಡು ಇವರದು ಒಂದು ಭಾಗವನ್ನು ಒಳಗಡೆ ಹಾಕಿದ್ದಾರೆ. ಪಾಪ ಆ ಹೆಂಗಸರು ಮತ್ತು ಮಕ್ಕಳು ನನ್ನ ಬಳಿ ಒಂದು ದಿನ ಬಂದಿದ್ದರು. ಅದನ್ನು ತಡೆ ಹಿಡಿಯುವ ಬಗ್ಗೆ ನಾನು ಬಹಳ ಪ್ರಯತ್ನವನ್ನು ಪಟ್ಟಿದ್ದೇನೆ. ಇವನಿಗೆ ಕೋರ್ಟ್ ಆದೇಶ ಇದೆ. ಇಲ್ಲದಿದ್ದರೆ ಅದನ್ನೂ ಒಳಗೆ ಹಾಕುತ್ತಿದ್ದರು. ಅವರ ಅರ್ಧ ಭಾಗವನ್ನು ಒಳಗೆ ಹಾಕಿದ್ದಾರೆ. ಇದೆಲ್ಲವನ್ನು ತನಿಖೆ ಮಾಡದೆ, ಸರ್ಕಾರ ಇದನ್ನು ಮುಂದುವರೆಸಲಿಕ್ಕೆ ಬಿಡಬಾರದು. ಸ್ತ್ರೀಶಕ್ತಿ ಸಂಘದವರಿಗೆ ಗ್ರಾಮೀಣ ಪ್ರದೇಶಗಳಲ್ಲಿ ನಾವು ಕೊಟ್ಟಿದ್ದೇವೆ. ಸ್ತ್ರೀ ಶಕ್ತಿ ಸಂಘದಲ್ಲಿ ಮಹಿಳೆಯರಿಗೆ ಅದರಲ್ಲಿಯೂ ವಿಧವೆಯರಿಗೆ ಮದುವೆಯಾಗಿರುವವರಿಗೆ ಈ ಕೆಲಸವನ್ನು ಕೊಟ್ಟಿದ್ದಾರೆ. ರಾಜ್ಯದಾದ್ಯಂತ ಇವರಿಗೆ ಕೊಡುವ ವ್ಯವಸ್ಥೆಯನ್ನು ಮಾಡಿದರೆ, ಇಡೀ ರಾಜ್ಯದಲ್ಲಿರುವವರಿಗೆ ಬಡವರಿಗೆ ಸಮಸ್ಯೆಯೇ ಇರುತ್ತಿರಲಿಲ್ಲ.

ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಶಾಲೆಗಳಿಗೆ ಬಿಸಿ ಊಟದ ಬದಲಾಗಿ ತಣ್ಣನೆ ಊಟ ಕೊಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇವರು ಮಾಡುವಂತಹ ಎಲ್ಲ ಚಟುವಟಿಕೆಗಳು ವಿದೇಶಗಳಿಂದ ಹಣ ತರುವಂಥಾದ್ದು, ಅಲ್ಲಿ ಒಂದು ಮಗುವಿಗೆ ಎಷ್ಟು ಹಣವನ್ನು ಕಲೆಕ್ಟ್ ಮಾಡುತ್ತಿದ್ದಾರೆ, ಅದರ ಬಗ್ಗೆ ಹೇಳಬೇಕು. Income Tax Department ನವರು ಇವರಿಗೆ ನೋಟೀಸ್ ಕೊಟ್ಟಿದ್ದಾರೆ. ಇವೆಲ್ಲವನ್ನು ತನಿಖೆ ಮಾಡದೇ ಅಕ್ಷರ ದಾಸೋಹ ಕಾರ್ಯಕ್ರಮವನ್ನು ಮುಂದುವರೆ ಸುವುದಕ್ಕೆ ಸರ್ಕಾರ ಇವರಿಗೆ ಅವಕಾಶ ಕೊಡಬಾರದು ಎಂದು ಹೇಳುತ್ತಾ, ಇವರಿಗೆ 'ಪದ್ಮ ವಿಭೂಷಣ' ಪ್ರಶಸ್ತಿಯನ್ನು ಕೊಡಬೇಕೆಂದು ತೀರ್ಮಾನ ಮಾಡಿರುವಂಥಾದ್ದು ಇದೆ, 'ಪದ್ಮ ವಿಭೂಷಣ' ಪ್ರಶಸ್ತಿಯನ್ನು ಯಾರ್‍ಯಾರಿಗೆ ಕೊಡಬೇಕೆಂದು ತೀರ್ಮಾನವಾಗಲಿ ಅಧ್ಯಕ್ಷರೆ. ಅಲ್ಲಿ ಯಾರ್‍ಯಾರು ರೆಕಮೆಂಡ್ ಮಾಡುತ್ತಾರೆ ಅದನ್ನು ಹೇಳಬೇಕು. ಅವರ ಹಿನ್ನೆಲೆ ಅಲ್ಲ. ಪ್ರಥಮವಾಗಿ ಈ ಸಂಸ್ಥೆಯ ಹಿನ್ನೆಲೆಯನ್ನು ತನಿಖೆ ಮಾಡದೆ, ಸರ್ಕಾರ ಪ್ರಶಸ್ತಿ ಕೊಡುವುದಕ್ಕೆ ಮುಂದುವರೆಯಬಾರದು ಎಂದು ಹೇಳುತ್ತಾ, ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ. ಎರಡು ನಿಮಿಷವೇ ಮಾತನಾಡಿದ್ದೇನೆ. ಎರಡು ನಿಮಿಷಗಳಿಗಿಂತ ಜಾಸ್ತಿ ತೆಗೆದುಕೊಂಡಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಸಂಪನ್ಮೂಲ ಹಕ್ಕುಗಳು, ಸಂಸದೀಯ ವ್ಯವಹಾರ, ಜಲಸಂಪನ್ಮೂಲ ಸಚಿವರು) :- ಮಾನ್ಯ ಅಧ್ಯಕ್ಷರೆ, ಈ ವಿಚಾರಗಳನ್ನು ಏನು ಪ್ರಸ್ತಾಪ ಮಾಡಿದ್ದಾರೆ, ಸಾರ್ವಜನಿಕವಾಗಿ ನಡೆದಿರತಕ್ಕಂತಹ ಈ ಕಾರ್ಯಕ್ರಮಗಳಲ್ಲಿ ಆಗುವಂತಹ ಅವ್ಯವಹಾರಗಳನ್ನು ಸರ್ಕಾರ ಖಂಡಿತವಾಗಿ ನೋಡಲೇಬೇಕಾಗುತ್ತದೆ. ಅದು ಅವರು ಬೇರೆ ವಂತಿಗೆಯನ್ನು ಗಳಿಸಿ ಮಾಡುತ್ತಿದ್ದೇವೆ ಎಂದು ಹೇಳಿದರೂ ಕೂಡ, ಅದಕ್ಕೆ ಸಂಬಂಧಪಟ್ಟಿರತಕ್ಕಂಥದ್ದು ಸರ್ಕಾರದ ಹಣ ಕೂಡ ಅದರಲ್ಲಿ ಇದೆ. ಆ ಕಾರಣಕ್ಕಾಗಿ ಮಾನ್ಯ ಮಾಧುಸ್ವಾಮಿಯವರು, ಮಾನ್ಯ ಶ್ರೀರಾಮರೆಡ್ಡಿಯವರು ಮತ್ತು ಮಾನ್ಯ ಹೆಗ್ಡೆಯವರು ಇದನ್ನು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಸಮಸ್ಯೆ ಬರತಕ್ಕಂಥಾದ್ದು ಈ ವಿಚಾರದಲ್ಲಿ ಚರ್ಚೆಯಾಗಬಾರದು ಎಂದು ಯಾರದೂ ಅಡ್ಡಿ ಇಲ್ಲ. ಚರ್ಚೆ ಆಗಲೇ ಬೇಕಾಗುತ್ತದೆ. ಅದರ ವ್ಯವಹಾರಗಳು ಒಬ್ಬರಿಗೊಬ್ಬರಿಗೆ ವ್ಯತ್ಯಾಸ ಇದೆ ಎನ್ನುವಂಥಾದ್ದು, ಮಧುಪಂಡಿತ್‌ದಾಸ್‌ರವರು ಇರತಕ್ಕಂತಹ ಇಸ್ಕಾನ್ ಸೊಸೈಟಿ ಅಂತ ಕರ್ನಾಟಕದಲ್ಲಿ ಏನಿದೆ, ಅದಕ್ಕೂ ಮಲ್ಲೇಶ್ವರಂದಲ್ಲಿ ಅವರದೇ ಆದ ಒಂದು ಇಸ್ಕಾನ್ ಸಂಸ್ಥೆ ಇದೆ. ಅದು ಪ್ರಪಂಚದ ಪಟ್ಟಿಯಲ್ಲಿ ಸೇರಿರುವಂಥಾದ್ದು. ಅವರದೇ ಆದ ಶಾಖಾ ಮಠಗಳು ಕೂಡ ಇವೆ. ಅವುಗಳ ಬಗ್ಗೆ ವಿವಾದ ಇದೆ. ಆ ವಿವಾದ ನ್ಯಾಯಾಲಯಗಳಲ್ಲಿ ಇರುವುದರಿಂದ ಅದನ್ನು ತೀರ್ಮಾನ ಮಾಡಬೇಕಾಗಿರುವುದು ಇದೆ. ಅದು subjudice ಆಗುತ್ತದೋ ಇಲ್ಲವೋ ಎಂದೂ ಕೂಡ ನೋಡಬೇಕಾಗುತ್ತದೆ. ಇಲ್ಲಿ ಇವರು ಪ್ರಶ್ನೆ ಹಾಕಿರುವಂಥಾದ್ದು ಅವರ ನಡುವೆ ಇರತಕ್ಕಂತಹ ವಿವಾದಗಳ ಬಗ್ಗೆ ನಾವು ಏನೂ ಮಾತನಾಡುವುದಿಲ್ಲ. ಆದರೆ ಆಗಿರತಕ್ಕಂತಹ ಅವ್ಯವಹಾರಗಳ ಬಗ್ಗೆ ನಾವು ಮಾತನಾಡುತ್ತೇವೆ.

ಹೊರದೇಶಗಳಲ್ಲಿ ಈ ರೀತಿ ಬರೀ ಬಡತನದ ಚಿತ್ರವನ್ನು ತೋರಿಸತಕ್ಕಂಥದ್ದು ಎಷ್ಟು ರಾಷ್ಟ್ರಾಭಿಮಾನದ ವಿಷಯ? ಒಂದು ವೇಳೆ ನೈಜ ಸ್ಥಿತಿ ಆಗಿದ್ದರೂ ಕೂಡ ತಮಗೆಲ್ಲಾ ಗೊತ್ತಿದ್ದ ಹಾಗೆ ಮೇಯೋ ಅಂತ ಒಬ್ಬ ಹೆಣ್ಣು ಮಗಳು, ಪ್ರಾಯಶಃ ಇದು ಸರಿಯಾದಂತಹ ಹೆಸರು ಎಂದು ಭಾವಿಸಿಕೊಂಡಿದ್ದೇನೆ. ಅವರು ಭಾರತಕ್ಕೆ ಬಂದಾಗ ಭಾರತ ದೇಶದ ಬಡತನ, ಅಜ್ಞಾನ ಮತ್ತು ಅಲ್ಲಿರುವಂತಹ ರೋಗರುಜಿನುಗಳು ಇವುಗಳ ಬಗ್ಗೆ ಆಕೆ ಚಿತ್ರಣವನ್ನು ಬರೆದಾಗ " She is the Gutter Inspector" ಎನ್ನತಕ್ಕಂತಹ ಶಬ್ದವನ್ನು ಮಹಾತ್ಮಾ ಗಾಂಧೀಜಿಯವರು ಬರೆದರು. ಒಳ್ಳೆಯ ವಿಚಾರಗಳು ಯಾವುದೂ ಇಲ್ಲದೇ, ನಮ್ಮಲ್ಲಿರುವಂತಹ ಇಂತಹ ಧೂಳು, ಅಜ್ಞಾನ, ರೋಗರುಜಿನುಗಳು ಇಂತಹ ವಿಚಾರಗಳನ್ನೇ ಆಕೆ ಬರೆದಿದ್ದಾರೆ.

ಆದ್ದರಿಂದ ಆಕಿ Gutter inspector ವಿನಃ ಭಾರತ ದೇಶವನ್ನು ನಿಜವಾದ ಅರ್ಥದಲ್ಲಿ ನೋಡಿಲ್ಲ ಎನ್ನುವಂತಹ ಮಾತು ಬಂದಿತು. ಹಾಗೆಯೇ 'The city of joy' ಎಂದು ಹೇಳಿ, ಡೊಮಿನಿಂಗೋ ಪಿಯಾಸ್ ಕಲ್ಕತ್ತಾದ ಬಗ್ಗೆ ಬರೆದಿರತಕ್ಕಂಥಾದ್ದು ಇದೆ. ಅಲ್ಲಿರುವಂತಹ ಕುಷ್ಠರೋಗಿಗಳ ಬಗ್ಗೆ , ಬೀದಿಯಲ್ಲಿ ಸಾಯುತ್ತಿರತಕ್ಕಂತಹವರ ಬಗ್ಗೆ, ನಿರ್ಮಲ ಹೃದಯ ಮದರ್ ಥೆರೆಸಾರವರು ಮಾಡಿರತಕ್ಕಂತಹ ವಿಚಾರದ ಬಗ್ಗೆ, ಅವರು ಬರದಿರತಕ್ಕಂತಹ ಪುಸ್ತಕದ ಬಗ್ಗೆಯೂ ಬಹಳ ದೊಡ್ಡ ವಿವಾದಗಳು ನಡೆದವು. ಅವರು 'city of joy' ಎಂದು ಹೇಳುತ್ತಾ, ಇಡೀ ಅಜ್ಞಾನದ ಕುರಿತಾಗಿ ಮಾತನಾಡಿರತಕ್ಕಂಥಾದ್ದು ಇದೆ. ಇದು ಎಷ್ಟರ ಮಟ್ಟಿಗೆ ಸಮಂಜಸ ಎನ್ನತಕ್ಕಂಥಾದ್ದರ ಬಗ್ಗೆ ಬಹಳ ವ್ಯತ್ಯಾಸಗಳು ಆದ ಮೇಲೆ, ಆ ಪುಸ್ತಕದ ಮಾರಾಟದಿಂದ ಬಂದಿರತಕ್ಕಂತಹ ಎಲ್ಲ ಹಣವನ್ನು ಕೂಡ ಅವರು ಟ್ರಸ್ಟಿಗೆ ಕೊಟ್ಟಿರತಕ್ಕಂಥಾದ್ದು ಆದ ಮೇಲೆ, ಬಾಂಗ್ಲಾದೇಶದಲ್ಲಿ ನಡೆದಿರುವ ವಿಚಾರ ಮಾನ್ಯ ಶ್ರೀರಾಮರೆಡ್ಡಿಯವರಿಗೂ ಗೊತ್ತಿರಬೇಕು.

ಶ್ರೀ ಕೆ.ಆರ್. ರಮೇಶ್ ಕುಮಾರ್ :- ಮಾನ್ಯ ಅಧ್ಯಕ್ಷರೆ, ಮೂರು ಬಹಳ ಪ್ರಮುಖವಾದ ವಿಚಾರಗಳನ್ನು ಅವರು ಪ್ರಸ್ತಾಪ ಮಾಡಿದರು. ಒಂದು ಎಲ್ಲಿಯೂ ಎಚ್ಚರ ತಪ್ಪಿ ಕೂಡ ಕರ್ನಾಟಕ ಸರ್ಕಾರದ ಸಹಯೋಗ ಅಥವಾ ಸಹಾಯ ಇದೆ ಎನ್ನತಕ್ಕಂಥಾದ್ದನ್ನು ಬಹಿರಂಗ ಮಾಡಿಲ್ಲ. ಅವರು ಹೇಳಿದ್ದಾರೆ. That is one allegation. ಎರಡನೆಯದು ಅದಮ್ಯ ಚೇತನ ಸಂಸ್ಥೆಯವರು ಏನು ನಡೆಸುತ್ತಿದ್ದಾರೆ, ಅವರು 3.60 ಪೈಸೆಗೆ ಊಟವನ್ನು ಕೊಡುತ್ತಿದ್ದಾರೆ, ಇವರು ಹೆಚ್ಚು ಜನರಿಗೆ ಊಟ ಕೊಡುತ್ತಿದ್ದಾರೆ, ಇವರು ಆರು ರೂಪಾಯಿ ಕಲೆಕ್ಟ್ ಮಾಡುತ್ತಿದ್ದಾರೆ, ನೀವು ಆ ವ್ಯತ್ಯಾಸವನ್ನು ನೋಡಿ. ಸಾವಿರಾರು ಕೋಟಿ ರೂಪಾಯಿಗಳು ಆಗುತ್ತವೆ ಎನ್ನುವ ಮಾತನ್ನು ಎಲ್ಲರೂ ಹೇಳಿದ್ದಾರೆ. ಮೂರನೆಯದು, ಈ ತರಹ ದಂಧೆಯಲ್ಲಿ ತೊಡಗಿ ಅದರಿಂದ ಬರತಕ್ಕಂತಹ ಹಣದಿಂದ ಅವರು real estate activities ಮಾಡುತ್ತಿದ್ದಾರೆ ಎನ್ನುವಂತಹ ಅಲಿಗೇಷನ್ ಮಾಡಿದ್ದಾರೆ. ನಮ್ಮದು ಇಷ್ಟೇ concern. ಈ ಕಾರ್ಯಕ್ರಮ ಬಹಳ ಒಳ್ಳೆಯ ಕಾರ್ಯಕ್ರಮ. ಅದರ ವಿಷಯದ ಬಗ್ಗೆ ನಾವು ಮಾತನಾಡುವುದಕ್ಕೆ ಹೋಗುವುದಿಲ್ಲ. ಇಂತಹವರ ಕೈಗೆ ಅದು ಹೋಗಿದೆ. ಮಾನ್ಯ ಸದಸ್ಯರು serious allegations ಮಾಡಿದ್ದಾರೆ. ಇದಕ್ಕೆ ಸರ್ಕಾರದ ಉತ್ತರ ಏನು? What action would you propose to take? Please tell us.

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೆ, ತಾವು ಅವರ ಮಾತುಗಳನ್ನು ಸಂಪೂರ್ಣವಾಗಿ ಗಮನಿಸಿದ್ದೀರಿ ಎಂದು ಭಾವಿಸಿಕೊಂಡಿದ್ದೇನೆ. ಇಲ್ಲಿ ಪ್ರಾಥಮಿಕವಾಗಿ ಈ ಒಂದು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೆಂದು ಹೇಳಿ ಅವರು ಪಸ್ತಾವವನ್ನು ಮಂಡಿಸುವಂತಹ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಪ್ರಸ್ತಾಪ ಮಾಡಿದ ವಿಷಯಕ್ಕೆ ಪೂರಕವಾಗಿ ಆ ಮಾತನ್ನು ಹೇಳುತ್ತೇನೆ. ಯಾವುದೇ ವಿಷಯವನ್ನು ನೇರವಾಗಿ ನೋಡಬೇಕಾದರೆ, ಒಂದು ದೇವರನ್ನು ನೋಡುವಂತಹ ಸಂದರ್ಭದಲ್ಲಿ ಹಿಂದೆ ಪ್ರಭಾವಳಿ ಕಟ್ಟಿರುತ್ತಾರೆ. ಆ ಪ್ರಭಾವಳಿ ನೋಡಿದರೆ ದೇವರನ್ನು ನೋಡುವಾಗ ಅದಕ್ಕೆ ಕಣ್ಣು ಕುಕ್ಕುವಂತಹ ಪ್ರಖರತೆ ಬರಬಾರದೆಂದು ಕಟ್ಟಿರುತ್ತಾರೆ. ಆದ್ದರಿಂದ ಅವರು ಪ್ರಭಾವಳಿ ಕಟ್ಟಿದ್ದರು. ಇವರು ಇಂತಹ ಚಿತ್ರಗಳನ್ನೆಲ್ಲಾ ಹೊರಗಡೆ ಮಾಡುತ್ತಿದ್ದಾರೆ, ಇದರಿಂದ ನಮ್ಮ ದೇಶದ ಅಜ್ಞಾನ ಮತ್ತು ಬಡತನ ಪ್ರಚಾರವಾಗುತ್ತಿದೆ.

ಇದು ಬರೀ ನಮ್ಮ ಕರ್ನಾಟಕ ಅಥವಾ ಭಾರತ ದೇಶಕ್ಕೆ ಸೀಮಿತವಾದುದು ಅಲ್ಲ. ತಾವು G-7 ನಿಂದ G-8 ಆಗತಕ್ಕಂಥದ್ದರ ಬಗ್ಗೆ ಕೂಡ ತಾವು ಪ್ರಸ್ತಾಪ ಮಾಡಿದ್ದೀರಿ.

(12 : 00 pm)

ಅದರ ಬಗ್ಗೆಯೂ ನಮ್ಮಲ್ಲಿ ಹೇಳುತ್ತಿದ್ದಾರೆ, "Our concern, of the entire Government, especially the Union Government wants to share a dinner table with G-8 countries, not with regard to the poor people of this country" ಎಂದು ಹೇಳತಕ್ಕಂಥ ವಿಷಯದಲ್ಲಿಯೂ ಕೂಡ ಬೇಕಾದಷ್ಟು ಚರ್ಚೆ ಆಗಿದೆ. ನಾವು ಜಿ–8 ಯವರ ಜೊತೆಗೆ ಕುಳಿತ ತಕ್ಷಣವೇ ನಮಗೇನು ದೊಡ್ಡ ಐಶ್ವರ್ಯ ನಮ್ಮ ಮನೆ ಬಾಗಿಲಿಗೆ ಬರುವುದಿಲ್ಲ. ಮಾನ್ಯ ಅಧ್ಯಕ್ಷರೆ, ತಮಗೆಲ್ಲರಿಗೂ ಗೊತ್ತಿರಬಹುದು, ಒಂದು ಹೊಸ ರೂಪದ ಮೂಲಕವಾಗಿ New colonism ಎಂದು ನಾವೇನು ಕರೆಯುತ್ತೇವೆ ಈ ಹೊಸ ವಸಾಹತುಶಾಹಿಯಿಂದ ದಕ್ಷಿಣ ಆಫ್ರಿಕಾದಲ್ಲಿ ಬಡತನ ಮತ್ತು ಹಸಿವಿನಿಂದ ಸಾಯತಕ್ಕಂಥ ಜನಗಳ, ಆ ಮಕ್ಕಳ ಮೇಲೆ ಇರತಕ್ಕಂಥ ನೊಣಗಳು, ಅವರ ಕೈಕಾಲುಗಳೆಲ್ಲಾ ಸಣ್ಣದಾಗಿದ್ದು ಅವರುಗಳಿಗೆ ಪೌಷ್ಠಿಕ ಆಹಾರವಿಲ್ಲದೇ ನರಳತಕ್ಕಂಥದ್ದು, ಇವೆಲ್ಲಾ ಚಿತ್ರಣಗಳನ್ನು, ಅದರಲ್ಲಿಯೂ ಕೂಡ ದಕ್ಷಿಣ ಆಫ್ರಿಕಾ ಖಂಡದಲ್ಲಿ ಬರುವಂಥ ಸೋಮಾಲಿಯಾ ಮತ್ತು ಮೊದಲಾದಂಥ ದೇಶಗಳಿಗೆ ಸಂಬಂಧಪಟ್ಟಿರತಕ್ಕಂಥ ಚಿತ್ರಣಗಳನ್ನು ಪದೇ ಪದೇ ತೋರಿಸತಕ್ಕಂಥಾದ್ದು, ಅಲ್ಲಿರುವಂಥ ಜನಗಳಿಗೆ ಅನುಕೂಲ

ಮಾಡಿಕೊಡಬೇಕು ಎನ್ನುವುದಕ್ಕಿಂತಲೂ ಹೆಚ್ಚಾಗಿ ಇವು ಎಂಥ ಅಸಹ್ಯವಾದಂಥ ಬಡತನದ ದೇಶಗಳು ಎಂಬುದು ತೋರಿಸುತ್ತಾ ಮತ್ತು ಯಾವುದೋ ಒಂದು ದೂರದೃಷ್ಟಿಯ ಕಾರ್ಯಕ್ರಮಗಳನ್ನು ಈ ರೀತಿಯಲ್ಲಿ ಮಾಡಿಕೊಂಡಿರತಕ್ಕಂಥದ್ದೂ ಕೂಡ ಇದೆ.

ಇಲ್ಲಿ ಅಂಥ ಅನೇಕ ವಿಷಯಗಳನ್ನು ಮನ ಒಲಿಸುವಂಥ ಕಾರ್ಯಕ್ರಮಕ್ಕಾಗಿ ಮೊದಲನೆಯ ಸಲವೇ ಅವರು ಹೇಳಿದರು. ಆ ಕಾರಣಕ್ಕಾಗಿಯೇ ನಾನು ಅನುಸಂಗಿಕವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಆದರೆ ಅಲ್ಲಿ ನಮ್ಮ ಸರ್ಕಾರದವರ ಪಾಲಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಏಕೆಂದರೆ ನಾವು ಬಿಸಿಯೂಟದ ಕಾರ್ಯಕ್ರಮಕ್ಕೆ ಕೊಡುವಂಥ ನೂರು ಗ್ರಾಂ ಅಕ್ಕಿ, ಬೇಳೆ ಮೊದಲಾದಂಥವನ್ನೆಲ್ಲವನ್ನೂ ಕೂಡ ತೆಗೆದುಕೊಂಡರೂ ಕೂಡ, ಅಲ್ಲಿ ಅದಮ್ಯ ಚೇತನದವರು 3 ರೂಪಾಯಿ 60 ಪೈಸೆಗೆ ಕೊಡುತ್ತಿರುವಾಗ ಇವರು 6 ರೂಪಾಯಿ ಬೀಳುತ್ತದೆ ಎಂದರೆ ಪ್ರಾಯಶಃ ಆ ಗುಣಮಟ್ಟದ ಆಹಾರದಲ್ಲಿ ವ್ಯತ್ಯಾಸವಿರಬಹುದು. ನನಗೆ ಗೊತ್ತಿಲ್ಲ. ಏಕೆಂದರೆ ಒಬ್ಬರಿಗೆ 3.60 ಪೈಸೆ ಆದರೆ ಮತ್ತೊಬ್ಬರಿಗೆ 6.00 ರೂಪಾಯಿ ಆಗಬಹುದು. ಯಾವ ತರಹದ ಆಹಾರವನ್ನು ಕೊಡುತ್ತಾರೆ ಅದು ನನಗೆ ಗೊತ್ತಿಲ್ಲ. ಇಲ್ಲಿ ಚರ್ಚೆಗೆ ಅವಕಾಶ ಕೊಡತಕ್ಕಂಥದ್ದರಲ್ಲಿ, " One of the conditions prerequisite for admission of an Adjournment Motion is that it should be urgent. i.e., that the situation is such that the debate there on needs no delay. I am of the view that the subject is not of such urgency as to require it to be taken up in supercession of the appointed business. Therefore I moved that the Motion is not admissible" ಎಂದು ಹೇಳಿ ಈ ವಿಷಯ ಬಂದಿರುವುದರಿಂದ ಈ ವಿಚಾರ ನಿಜವಾಗಿಯೂ ಕೂಡ ಅತ್ಯಂತ ಗಂಭೀರವಾಗಿರತಕ್ಕಂಥ ವಿಷಯ.

ಈ ವಿಷಯದ ಬಗ್ಗೆ ಚರ್ಚೆಯಾಗಲೇ ಬೇಕಾಗುತ್ತದೆ. ಯಾರ್‍ಯಾರು ಈ ಅವ್ಯವಹಾರದಲ್ಲಿ ತೊಡಗಿದ್ದಾರೆ ಮತ್ತು ತೊಡಗಿರತಕ್ಕಂಥವರ ಬಗ್ಗೆಯೂ ಕೂಡ ಕ್ರಮ ಕೈಗೊಳ್ಳಬೇಕು ಎನ್ನುವುದರ ಬಗ್ಗೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಈಗ ತಾನೇ ನಾನು ಅದನ್ನು ಹೇಳಬೇಕು ಎಂದುಕೊಂಡಿದ್ದೆ. ನೀವು ಮಾತನಾಡತಕ್ಕಂಥ ಸಂದರ್ಭದಲ್ಲಿ ಹೇಳಿದಿರಿ, ಅವರು ಕನಕಪುರ ರಸ್ತೆಯಲ್ಲಿ ಅಪಾರ್ಟ್‌ಮೆಂಟ್‌ಗಳನ್ನು ಕಟ್ಟಿದ್ದಾರೆ ಎಂದು ಹೇಳಿದಿರಿ. ಅದರ ಮುಂದುಗಡೆಯೇ ಒಂದು ಥೀಮ್ ಪಾರ್ಕ್

ಮಾಡುತ್ತೇವೆ ಎಂದಿದ್ದಾರೆ. ಕೃಷ್ಣ ಲೀಲೆಗೆ ಸಂಬಂಧಪಟ್ಟಂತೆ ಒಂದು ಥೀಮ್ ಪಾರ್ಕ್ ಮಾಡುತ್ತೇವೆಂದು ಅವರು ನಾನು ಕಂದಾಯ ಮಂತ್ರಿಯಾಗಿದ್ದಾಗ ಒಂದು ಅರ್ಜಿಯನ್ನು ಕಳುಹಿಸಿಕೊಟ್ಟರು.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕ್ಷರೆ, ಚರ್ಚೆಗೆ ಅವಕಾಶ ಕೊಟ್ಟರೆ ನಾವೂ ಕೂಡ ಅದನ್ನೆಲ್ಲಾ ವಿವರವಾಗಿ ಹೇಳುತ್ತೇವೆ. ಮೊದಲು ಚರ್ಚೆಗೆ ತಾವು ಅಲೋ ಮಾಡಿ ಎಂದು ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ಅಧ್ಯಕ್ಷರೆ, ತಾವು ತಮ್ಮ ಪೀಠದ ಮೂಲಕವಾಗಿ ತಾವು ಹಿಂದೆ ಇದ್ದಂಥ ಹಿರಿಯರುಗಳೆಲ್ಲರೂ ಕೂಡ, ಅನೇಕ ತೀರ್ಪುಗಳನ್ನು ಕೊಟ್ಟಿದ್ದೀರಿ. ಈ ತಕ್ಷಣದಲ್ಲಿಯೇ ಈ ವಿಚಾರ ಚರ್ಚೆಗೆ ಬರದೇ ಇದ್ದರೆ ಬಹಳ ತಪ್ಪಾಗುತ್ತದೆ ಎನ್ನುವಂಥ ರೀತಿಯಲ್ಲಿದ್ದಾಗ ಮಾತ್ರ ಈ ನಿಗದಿತವಾಗಿರತಕ್ಕಂಥ ಕಾರ್ಯಕ್ರಮಗಳನ್ನು ಬದಿಗಿಟ್ಟು ತಾವು ಅವಕಾಶ ಕೊಡಬೇಕು ಎಂದಿದೆ. ಆದರೆ ಇದು ಅಂಥ ಅರ್ಜೆನ್ಸಿ ಇಲ್ಲದೇ ಇರತಕ್ಕಂಥ ಕಾರಣ ವಾಗಿರುವುದರಿಂದ ಅದನ್ನು ತಾವು ಬೇರೊಂದು ರೂಪದಲ್ಲಿ ತೆಗೆದುಕೊಳ್ಳಬಹುದು. ಇವೊತ್ತೇ ಕಡೆಯ ದಿನವಾಗಿರುವುದರಿಂದ ನಮ್ಮಲ್ಲಿ ಎಲ್ಲಾ ಬಿಲ್‌ಗಳನ್ನೂ ಕೂಡ ಮೇಲ್ಮನೆಗೆ ಕೂಡ ತೆಗೆದುಕೊಂಡು ಹೋಗಬೇಕಾಗುತ್ತದೆ. ಈಗ ಹತ್ತು ವಿಧೇಯಕಗಳಿವೆ. ಹತ್ತು ವಿಧೇಯಕಗಳನ್ನು ತೆಗೆದುಕೊಳ್ಳಲಿಕ್ಕೆ ಆಗಲಿಲ್ಲವೆಂದರೂ ಕೂಡ ಅತ್ಯಂತ ಪ್ರಮುಖವಾಗಿರತಕ್ಕಂಥ ನಾಲ್ಕೈದು ಬಿಲ್‌ಗಳನ್ನಾದರೂ ಕೂಡ ತಾವು ತೆಗೆದುಕೊಂಡರೆ, ನಾವು ತಮಗೆ ಅರಿಕೆ ಮಾಡಿಕೊಳ್ಳುತ್ತೇವೆ, ಯಾವ ಬಿಲ್‌ಗಳನ್ನು ತಕ್ಷಣದಲ್ಲಿಯೇ ತೆಗೆದುಕೊಳ್ಳಬಹುದೆಂದು. ನಾಲ್ಕೈದು ಬಿಲ್‌ಗಳು ಆದಮೇಲೆ ಅದನ್ನು ನಾವು ಮೇಲ್ಮನೆಗೂ ಕೂಡ ತೆಗೆದುಕೊಂಡು ಹೋಗಬೇಕಾಗಿರುವ ಅನಿವಾರ್ಯತೆ ಇರುವುದರಿಂದ ಇದನ್ನು ತಾವು ಬೇರೊಂದು ರೂಪದಲ್ಲಿ ತೆಗೆದುಕೊಂಡು ಈ ದಿವಸ ರಾತ್ರಿ ಹತ್ತು, ಹನ್ನೆರಡು ಗಂಟೆಯವರೆಗೂ ಕೂಡ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ. ಇದು ಕೊನೆಯ ದಿವಸವಾಗಿರುವುದರಿಂದ ಈ ರೀತಿ ಹೇಳುತ್ತಿದ್ದೇನೆ. ಎಲ್ಲರೂ ಕೂಡ ಈ ಬಗ್ಗೆ ಉದಾರತೆ ತೋರಿಸಿದರೆ, ನಾವು ಬರಗಾಲದ ವಿಷಯ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿರತಕ್ಕಂಥಾದ್ದರ ಬಗ್ಗೆ ಈಗಾಗಲೇ ನಮ್ಮ ಕಾರ್ಯಕ್ರಮ ಪಟ್ಟಿಯಲ್ಲಿದೆ. ಅದನ್ನು ತೆಗೆದುಕೊಂಡ ನಂತರ ತಾವು ಮತ್ತೊಂದು ರೂಪದಲ್ಲಿ ಇದನ್ನು ತೆಗೆದುಕೊಳ್ಳಬಹುದು.

ಅಧ್ಯಕ್ಷರು :- ಈಗ ನಿಲುವಳಿ ಸೂಚನೆಯನ್ನೇನು ನನಗೆ ಕಳುಹಿಸಿದ್ದಾರೆ, ಆ ಬಗ್ಗೆ ನಾನು ಅನುಮತಿಯನ್ನು ನಿರಾಕರಿಸಿದ್ದೇನೆ. ಇದನ್ನು ಇವೊತ್ತೇ ಎಷ್ಟು ಗಂಟೆಯಾದರೂ ಕೂಡ ನಿಯಮ 69 ರಡಿಯಲ್ಲಿ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೆ, ಬಹಳ ವಿಷಯಗಳನ್ನು ತರಬೇಕಾಗಿದೆ, ಏನಾದರೂ ಮಾಡಿ ಚರ್ಚೆಗೆ ಅವಕಾಶವನ್ನು ಈಗಲೇ ಕೊಡಿ.

ಅಧ್ಯಕ್ಷರು :- ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದೆನಲ್ಲಾ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಯಾವಾಗ?

ಅಧ್ಯಕ್ಷರು :- Time fix up ಮಾಡುತ್ತೇನೆ. ಈಗ ಬಿಲ್ ಬೇರೆ ಆಗಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೆ, ಸುಮ್ಮನೆ ವೇಗ್ ಆಗಿ ಹೇಳುವಂಥ ವಿಷಯವಲ್ಲ. ನಾವು ಜಸ್ಟಿಫೈ ಮಾಡಬೇಕಲ್ಲ.

ಅಧ್ಯಕ್ಷರು :- ಮಾಧುಸ್ವಾಮಿಯವರೆ, ನಾನು ತಮಗೆ ಒಂದು ಗಂಟೆ ಕಾಲ ಅವಕಾಶ ಮಾಡಿಕೊಡುತ್ತೇನೆ. ಒಂದೊಂದಾಗಿ ತೆಗೆದುಕೊಳ್ಳುತ್ತೇನೆ. ದಯಮಾಡಿ ಸಹಕರಿಸಿ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ :

ವಿಷಯ :- (ಅ) ಇನ್‌ಫೋಸಿಸ್‌ನ ನಾರಾಯಣ ಮೂರ್ತಿಗಳು ರಾಷ್ಟ್ರಗೀತೆಗೆ ಅವಮಾನ ಮಾಡಿರುವ ಬಗ್ಗೆ:

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ, ನಾನು ಹಿಂದೆಯೇ ಇನ್‌ಫೋಸಿಸ್ ನಾರಾಯಣಮೂರ್ತಿ ಬಗ್ಗೆ ಈ ಸದನದಲ್ಲಿ ಮಾನ್ಯ ಗೃಹ ಮಂತ್ರಿಗಳ ಗಮನ ಸೆಳೆದಿದ್ದೆ. ಅವರು ನಿನ್ನೆಯೇ ಈ ಸದನಕ್ಕೆ ಒಂದು ವರದಿಯನ್ನು ಸಲ್ಲಿಸುತ್ತೇನೆಂದು ಹೇಳಿದ್ದರು. ನಿನ್ನೆ ಮಾನ್ಯ ಪ್ರಕಾಶ್‌ರವರು ಇಡೀ ದಿನ ಸದನಕ್ಕೆ ಬರಲಿಲ್ಲ. ನಾನು ಇಡೀ ದಿನ ಅವರು ಬಂದು ಈ ಬಗ್ಗೆ ಹೇಳಬಹುದು, ಅವರು ಬಂದು ಹೇಳಿಕೆ ಕೊಡುತ್ತಾರೆ ಎಂದು ಕಾದಿದ್ದೆ. ನಾವು ಇಡೀ ದಿನ ಮಾನ್ಯ ಗೃಹ ಸಚಿವರನ್ನು ಕಾದುಕೊಂಡಿದ್ದೆವು. ಅವರೇನಾದರೂ ಬಂದು ಉತ್ತರ ಕೊಡುತ್ತಾರೆ ಎಂದುಕೊಂಡಿದ್ದೆವು. ಏಕೆಂದರೆ ಬಹಳ ಗಂಭೀರವಾದಂಥ ಪರಿಸ್ಥಿತಿ ಇದೆ. ರಾಷ್ಟ್ರಗೀತೆಗೆ ಅಗೌರವವಾಗಿರತಕ್ಕಂಥ ವಿಚಾರವಿದು. ಇಂಥದ್ದರಲ್ಲಿ ಕೇವಲ ಕರ್ನಾಟಕ ಸರ್ಕಾರ